ಸಂಬಂಧ ಈಗ ಇಲ್ಲ. ಆದುದರಿಂದ ನೀವೆಲ್ಲ ಈಗ ಸರಿಯಾಗಿ ನಡೆದುಕೊಳ್ಳಿ. ಅದು ನಿಮ್ಮ ಕರ್ತವ್ಯ ಎಂದು ಹೇಳಬೇಕು. ಇನ್ನು ಜಿಲ್ಲಾ ಮಟ್ಟದ ಸಬ್ ಪ್ಲಾನ್ ತಯಾರು ಮಾಡಿದ್ದೀರಿ, ಇದು ನಿಜವಾಗಿಯೂ ಬಹಳ ಉಪಯುಕ್ತವಾದ ಪ್ಲಾನ್ ಇದೆ. ಅಲ್ಲಿ ಲೋಕೋಪಯೋಗಿ ಇಲಾಖೆಯವರಿಂದ ಕೆಲಸ ಆಗುವುದಿಲ್ಲ. ಟಿ.ಡಿ.ಬಿ ನವರು ೬–೭ ಲಕ್ಷ ರೂಪಾಯಿ ಖರ್ಚು ಮಾಡುವುದಕ್ಕಾಗುವುದಿಲ್ಲ. ಇಂತಹ ಸಮಯದಲ್ಲಿ ಸಬ್ ಪ್ಲಾನ್‌ಗಳಿಗೆ ಹೆಚ್ಚು ಹಣ ಒದಗಿಸಿ ಆಗತ್ಯ ಕೆಲಸಗಳನ್ನು ಮಾಡುವುದಕ್ಕಾಗುತ್ತದೆ. ಅದಕ್ಕಾಗಿ ಸರ್ಕಾರ ಹೆಚ್ಚು ಹಣವನ್ನು ಒದಗಿಸಬೇಕೆಂದು ನಾನು ಹೇಳುತ್ತೇನೆ. ಬಹಳ ದಿನಗಳ ಆಡಳಿತ ಮಾಡಿ ಈಗ ವಿರೋಧ ಪಕ್ಷದಲ್ಲಿ ಕುಳಿತಿರುವ ಜನ ಅಲ್ಪಸಂಖ್ಯಾತರಿಗೆ ಆರ್ಥಿಕವಾಗಿ ಹಣವನ್ನು ಇಟ್ಟಿರಲಿಲ್ಲ. ಅವರಿಗೆ ಅನುಕೂಲವಾಗುವ ರೀತಿ ಆಯವ್ಯಯವನ್ನು ತಯಾರು ಮಾಡಿಲ್ಲವೆಂದು ಹೇಳುತ್ತೇನೆ. ೧೯೬೧ರಲ್ಲಿ ಸುಮಾರು ೨೯–೩೦ ಪರ್ಸೆಂಟ್ ಜನ ಬಡತನದ ರೇಖೆಯಲ್ಲಿ ಇದ್ದವರು ೧೯೮೧ರ ಹೊತ್ತಿಗೆ ೬೭–೪೮ ಪರ್ಸೆಂಟ್‌ಗೆ ಬಂದಿದೆ. ಇವರ ಬಗ್ಗೆ ಬರಿ ಬಾಯಲ್ಲಿ ಕನಿಕರವನ್ನು ತೋರಿಸಿ ಕೊಂಡು ಬಂದರೇ ಹೊರತು ಏನನ್ನೂ ಅವರಿಗಾಗಿ ಮಾಡಲಿಲ್ಲ. ಮುಖ್ಯವಾಗಿ ಹರಿಜನರ ಬಗ್ಗೆ, ಹಳ್ಳಿಗಳವರ ಬಗ್ಗೆ ಕಳಕಳಿ ವ್ಯಕ್ತಪಡಿಸಿದ್ದಾರೆ. ಅವರು ಹರಿಜನರ ಅಭಿವೃದ್ಧಿ ಬಗ್ಗೆ ಅವರ ಅಭ್ಯುದಯದ ಬಗ್ಗೆ ಸರಿಯಾದ ಪ್ರಯತ್ನ ಮಾಡಲಿಲ್ಲ. ಅಧಿಕಾರದಲ್ಲಿ ಇದ್ದವರು ಅವರ ಬಗ್ಗೆ ಬಾಯಲ್ಲಿ ಕನಿಕರವನ್ನು ತೋರಿಸಿಕೊಂಡು, ಅವರಿಂದ ಕೆಲಸ ಮಾಡಿಸಿಕೊಂಡು ಅವರಿಂದ ಓಟನ್ನು ಪಡೆದು ಕೊಂಡು ಬಂದಿದ್ದಾರೆ. ಈ ಒಂದು ಸಮಸ್ಯೆಗೆ ಕಾರಣ ಏನು ? ಇನ್ನು ಮೇಲಾದರೂ ಕೂಡಾ ಅವರು ತಮ್ಮ ಕಾಲಮೇಲೆ ನಿಂತು ಸ್ವಂತ ಅಭ್ಯುದಯವನ್ನು ಅವರು ಮಾಡುವ ರೀತಿಯಲ್ಲಿ ಪ್ರಯತ್ನ ಮಾಡಬೇಕೆಂದು ನಾನು ಸರ್ಕಾರದಲ್ಲಿ ಕೇಳಿಕೊಳ್ಳುತ್ತೇನೆ.

ಕೊನೆಯದಾಗಿ, ಮಾನ್ಯ ಬಂಗಾರಪ್ಪನವರು ಮಾತನಾಡುವ ಕಾಲದಲ್ಲಿ ಗಾಯವಾಗಿದೆ ಹುಳು ಬೀಳುವುದಕ್ಕೆ ಅವಕಾಶ ಕೊಡಬೇಡಿ ಎಂದು ಹೇಳಿದರು ಆದರೆ ಅವರ ಕಾಲದಲ್ಲಿಯೇ ಗಾಯವಾಗಿ ಹುಳು ಸಹ ಬಿದ್ದಿತು ಅದರೆ ಅದು ಅವರ ಕಣ್ಣಿಗೆ ಕಾಣುತ್ತಿರಲಿಲ್ಲ. ಆ ಹುಳು ಏನು ಬಿದ್ದಿದೆ ಅದಕ್ಕೆ ಔಷಧಿಯಿಲ್ಲ, ಅಷ್ಟು ಗಾಯ ಕೆಟ್ಟು ಹೋಗಿದೆ. ಅದಕ್ಕೋಸ್ಕರವಾಗಿ ಔಷಧಿಯನ್ನು ನಾವು ಕಂಡು ಹಿಡಿಯುತ್ತಿದ್ದೇವೆ ಅದನ್ನು ವಾಸಿ ಮಾಡುತ್ತೇವೆ ಎನ್ನುತಕ್ಕ ಭರವಸೆಯನ್ನು ಕೊಟ್ಟು ನನ್ನ ಎರಡು ಮಾತಂಗಳನ್ನು ಮುಂಗಿಸುತ್ತೇನೆ,

Statement by the Minister

reg.—Suspension of the I. B. Watchman by the Minister.

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್ (ತೋಟಗಾರಿಕೆ ಮಂತ್ರಿ ಹೈಸುಗಾರಿಕೆ ಮಂತ್ರಿಗಳು).—

ಅಧ್ಯಕ್ಷರೇ, ಬಹಳ ಸಂತೋಷವಾಗುತ್ತದೆ ಏತಕ್ಕೆಂದರೆ ನಮ್ಮ ಜಿಲ್ಲೆಯ ಶಾಸಕರು ಮತ್ತು ಹಿಂದಕ್ಕೆ ಮಂತ್ರಿಗಳೂ ಆಗಿದ್ದಂಥ ಇಬ್ಬರು ಸಣ್ಣ ವಿಷಯವನ್ನು ನನ್ನ ಮಟ್ಟಿಗೆ ಇಷ್ಟೊಂದು ಕಾಳಜಿ ಇಟ್ಟುಕೊಂಡು ಆಲೋಚನೆ ಮಾಡಿ ಹೇಳಿದ್ದಾರೆಂದರೆ ಅದು ನಿಜಕ್ಕೂ ಸಂತೋಷದ ವಿಷಯವೇ ಆಗಿದೆ. ಏತಕ್ಕೆಂದರೆ ಇಷ್ಟಿಷ್ಟು ಸಣ್ಣ ವಿಷಯದಲ್ಲಿ ಅವರು ಕಣ್ಣು ಇಟ್ಟಮೇಲೆ ದೊಡ್ಡ ತಪ್ಪುಗಳು ನನ್ನಿಂದ ಆಗಬಾರದು ಎನ್ನುವುದಕ್ಕೆ ಎಚ್ಚರಿಕೆಯನ್ನು ನಾನು ವಹಿಸುವುದಕ್ಕೆ ಆಸ್ಪದ ಕೊಟ್ಟ ಹಾಗಾಯಿತು, ಮಾನ್ಯ ಶ್ರೀ ಧರ್ಮಸಿಂಗ್‌ರವರು ಇಲ್ಲಿ ಇಲ್ಲ, ಅವರು ಇರಬೇಕಾಗಿತ್ತು. ಮಾನ್ಯ ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆಯವರು ಇದ್ದಾರೆ ಸಂತೋಷ. ನಾನು ರಾಜಕೀಯ ಜೀವನದಲ್ಲಿ ೧೯೫೨ ರಿಂದ ಕಾಲಿಟ್ಟು ಕೆಲಸ ಮಾಡುತ್ತಿರುವಾಗ ಇವರು ೧೯೬೨ ರಲ್ಲಿ ನಮ್ಮ ಕಾರ್ಯಕರ್ತರಾಗಿ ಕೆಲಸ ಮಾಡಿದ್ದಾರೆ,

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ಇವರ ಕಾರ್ಯಕರ್ತ ನಾನು ಎಂದೂ ಆಗಿರಲಿಲ್ಲ ಬಿ. ಸೋಮಶೇಖರ್ ಎಂದು ನಮ್ಮ ಲೀಡರ್ ಇದ್ದರು, ಅವರಿಗೂ ಮತ್ತು ಇವರಿಗೂ ಅಲೈನ್ಸ್ ಆದಾಗ ಇದ್ದೆವು ಅಷ್ಟೇ. ಆದರೆ ನಾನು ಇವರ ಶಿಷ್ಯ ಎಂದೂ ಕೂಡ ಆಗಿರಲಿಲ್ಲ, ಆಗಿರುವುದೂ ಇಲ್ಲ.

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್,—ನಮ್ಮ ಸಲುವಾಗಿ ಕೆಲಸ ಮಾಡಿದ್ದೀರಿ. ವಿರೋಧ ಪಕ್ಷದ ಸಂಘಟನೆಯನ್ನು ಮಾಡುವ ಕಾಲಕ್ಕೆ ೧೯೬೭ ರಲ್ಲಿ ನೀವು ಅವರ ಜೊತೆಯಲ್ಲಿ ಸೇರಿ ನಮ್ಮ ಶಿಷ್ಯರಾಗಿ ಕೆಲಸ ಮಾಡಿದ್ದೀರಿ, ಇಡೀ ಹೈದರಾಬಾದ್ ಕರ್ನಾಟಕದಲ್ಲಿ ವಿಶೇಷವಾಗಿ ಗುಲ್ಬರ್ಗ

ಮತ್ತು ರಾಯಚೂರು ಜಿಲ್ಲೆಗಳಲ್ಲಿ ಕಾಂಗ್ರೆಸ್‌ನ ವಿರುದ್ಧವಾಗಿ ಹೋರಾಟ ಮಾಡಿದವನು ನಾನು ಎಂಬುದು ಎಲ್ಲರಿಗೂ ಗೊತ್ತಿರತಕ್ಕ ವಿಷಯವೇ ಆಗಿದೆ.

ಶ್ರೀ ಎಂ. ಎಸ್ ಕೃಷ್ಣನ್ --ಶಿಸ್ಯರು ಗುರುವಿಗೇ ತಿರುಪು ಮಂತ್ರ ಹಾಕುತ್ತಿದ್ದಾರೆ ..

ಶ್ರೀ ವಿಶ್ವನಾಥ್‌ರೆಡ್ಡಿ ಮುದ್ನಾಳ್.--ಮಂತ್ರಿಗಳು ಮಾಯ್ಕೊಪಾದ ವಿಷಯಗಳನ್ನು ಪ್ರಸ್ತಾಪ ಮಾಡಿ ಹೇಳಿದ್ದಾರೆ. ಮೊದಲನೆಯದಾಗಿ, ನನ್ನ ಮಗ ಸ್ಕೂಟರ್ ಕಲಿಸುವ ಕಾಲದಲ್ಲಿ ಸಬ್ ಇನ್ಸ್‌ಪೆಕ್ಟರ್ ರವರು ಹಿಡಿದ ಆದಕ್ಕಾಗಿ ಟ್ರಾನ್ಸ್‌ಫರ್ ಮಾಡಿದ್ದಾರೆ ಎಂದು ಹೇಳಿದ್ದಾರೆ. ಆದರೆ ಈ ಘಟನೆ ಚುನಾವಣೆಗೂ ಮೊದಲೇ ನಡೆದಿದ್ದು. ಇದನ್ನು ತಾವು ತಿಳಿದುಕೊಳ್ಳಬೇಕು. ಆನಂತರ ಈ ಘಟನೆಯಲ್ಲಿ ಏನಾಗಿದೆ ಎಂದರೆ ನನ್ನ ಮಗ ಸ್ಕೂಟರ್ ಮೇಲೆ ಹೋಗುತ್ತಿರಲಿಲ್ಲ ಲೂನದ ಮೇಲೆ ಹೋಗುತ್ತಿದ್ದ. ಸಬ್ ಇನ್ಸ್‌ಪೆಕ್ಟರ್ ತಾನು ಮಾಡಿದ್ದು ತಪ್ಪು ಎನ್ನತಕ್ಕದ್ದು ಆದಿವಾದ ಮೇಲೆ ಮನೆತನಕ ಬಂದು ಕ್ಷಮೆ ಬೇಡಿ ಹೋದ. ಆನಂತರ ಆ ಸಬ್ ಇನ್ಸ್‌ಪೆಕ್ಟರ್ ಟ್ರಾನ್ಸ್‌ಫರ್‌ನ್ನು ಅವನಾಗಿಯೇ ಬಯಸಿ ಬಂದು ಕೇಳಿದ್ದಕ್ಕೆ ನಿನಗೆ ಎಲ್ಲಿಗೆ ಬೇಕೋ ಹೇಳು ಅಲ್ಲಿಗೆ ಕಳುಹಿಸಿಕೊಡುತ್ತೇನೆ ಎನ್ನತಕ್ಕ ಮಾತನ್ನು ಹೇಳಿದೆ.

(ಗೊಂದಲ)

ಎರಡನೆಯ ವಿಷಯ, ಪೋಲ್ಸ್ ಕಾರ್ಖಾನೆ, ಇದನ್ನು ನಾನು ಕಿತ್ತು ಹಾಕಿಸಿದ್ದೇನೆ ಎನ್ನತಕ್ಕ ಆಪಾದನೆಯನ್ನು ಮಾಡಿದ್ದಾರೆ. ಗುಲ್ಬರ್ಗ ಜಿಲ್ಲೆಯಲ್ಲಿ ಬ್ಲ್ಯು ಕಂಟ್ರಾಕ್ಟರ್ ಇದ್ದಾನೆ ಅವನು ಅಧಿಕಾರಕ್ಕೆ ಯಾರು ಬರುತ್ತಾರೋ ಅವರ ಜೊತೆಗೆ ಹೊಗಿ ಕಮಿಷನ್ ಹೊಗಿ. ಅವರ ಬಾಧುತ್ವ, ಮಿತ್ರತ್ವವನ್ನು ತೋರಿಸಿಕೊಂಡು ತನ್ನ ಕೆಲಸಗಳನ್ನು ಮಾಡಿಸಿಕೊಳ್ಳತಕ್ಕ ಪ್ರವೃತ್ತಿ ಹೊಂದಿದ್ದಾನೆ ಎನ್ನತಕ್ಕ ಮಾತನ್ನು ನನಗೆ ಕೆಲವರು ಹೇಳಿದರು. ಅವನು ಹಿಂದೆಲ್ಲಾ ನಿಮ್ಮ ಹೆಸರನಲ್ಲಿ ಫ್ಯಾಕ್ಟರಿ ಹಾಕಿದ್ದಾನೆ ಅದನ್ನು ನಡೆಸುತ್ತಿದ್ದಾನೆ. ಆ ಜಾಗ ನಾನ್ ಅಗ್ರಿಕಲ್ಚರಲ್ ಲ್ಯಾಂಡ್ ಅಲ್ಲಿ ಮಾಡುತ್ತಿದ್ದಾನೆ ಎನ್ನತಕ್ಕ ಮಾತನ್ನು ಹೇಳಿದರು. ಆಗ ನಾನು ಕೂಡಲೇ ತಹಶೀಲ್ದಾರ್‌ರವರಿಗೆ ಹೇಳಿದೆ. ನೀವು ಕಾನೂನು ಪ್ರಕಾರವಾಗಿ ಕ್ರಮವನ್ನು ತೆಗೆದುಕೊಳ್ಳಿ, ನಾನು ಏನೂ ಶಿಫಾರಸ್ಸು ಮಾಡುವುದಿಲ್ಲ ಎನ್ನತಕ್ಕ ಮಾತನ್ನು ಹೇಳಿದೆ. ಆನಂತರ ಅಲ್ಲಿಯ ತಹಶೀಲ್ದಾರ್‌ರವರು ಮತ್ತು ಅಸಿಸ್ಟೆಂಟ್ ಕಮಿಷನರ್‌ರವರು ಸೂಕ್ತವಾದ ಕ್ರಮವನ್ನು ತೆಗೆದುಕೊಂಡಿದ್ದಾರೆಯೇ ಹೊರತು ಬೇರೆ ಏನೂ ಇಲ್ಲ. ಇದು ಇಷ್ಟು ಆ ಕಾರ್ಖಾನೆಗೆ ಸಂಬಂಧಪಟ್ಟ ಹಾಗೆ ವಿವರಣೆಯನ್ನು ಕೊಟ್ಟಿದ್ದೇನೆ. ಇನ್ನು ಮೂರನೆಯದಾಗಿ, ಮಾವಿನ ಹಣ್ಣಿನ ವಿಷಯ. ಇದರ ಬಗ್ಗೆ ತಾಸುಗಟ್ಟಲೆ ಹೇಳಿರಬೇಕಾಗಿರುವುದಿಲ್ಲ. ಏಕೆಂದರೆ ತಾತ್ವಿಕವಾದ ಚರ್ಚೆಯಲ್ಲಿ ಇದನ್ನು ಹೇಳಬೇಕಾಗುತ್ತದೆ. ಸುಮಾರು ನನ್ನ ರಾಜಕೀಯ ಜೀವನ ದೊಳಗೆ ತಾತ್ವಿಕ ತಳಹದಿಯ ಮೇಲೆಯೇ ನನ್ನ ಜೀವನವನ್ನು ನಡೆಸಿದ್ದೇನೆ. ನಾನು ಪಾರ್ಟ್ ತಿಂಗಳಲ್ಲಿ ಸುರಪುರಕ್ಕೆ ಹೋದಾಗ ನಾನೇ ದುಡ್ಡು ಕೊಟ್ಟು ೨೫ ಮಾವಿನ ಹಣ್ಣನ್ನು ತರಿಸಿಟ್ಟು ಅದನ್ನು ಫ್ರಿಜ್‌ನಲ್ಲಿ ಇಡಿ ಎಂದು ಹೇಳಿದೆ. ಸಾಯಂಕಾಲ ೫ ಗಂಟೆಗೆ ಕಾರ್ಯಾಗೆ ನನ್ನ ಮಿತ್ರರು ಬಂದುದರಿಂದ ಹಣ್ಣನ್ನು ತೆಗೆದುಕೊಂಡು ಬನ್ನಿ ಎಂದು ಹೇಳಿದೆ. ಆಗ ಅವರು ೧೫ ಹಣ್ಣನ್ನು ತಂದರು. ನಾನು ಕೇಳಿದೆ ೨೫ ಹಣ್ಣು ತರಿಸಿದ್ದೆ ೧೫ ಹೇಗಾಯಿತು ಎಂದು ಅದಕ್ಕೆ ಅವರು ಇಷ್ಟೇ ಇರುವುದು ಎಂದು ಹೇಳಿದರು, ಅದು ಹೇಗಾಗುತ್ತದೆ ? ಇನ್ನು ೧೦ ಹಣ್ಣು ಎಲ್ಲಿಗೆ ಹೋಯಿತು ಇದನ್ನು ವಿಚಾರ ಮಾಡಬೇಕು ಎನ್ನುವ ಉದ್ದೇಶದಿಂದ ಕೇಳಿದೆ. ಆದಕ್ಕೆ ಅವರು ಇಲ್ಲ ನಾವೆ ಎಂದ ಅಲ್ಲೆಲ್ಲಾ ಹುಡುಕಾಡಿದರು. ಕೊನೆಗೆ ಒಬ್ಬ ಲಾರಿ ಡ್ರೈವರ್ ಬಂದಿದ್ದ ಅವನು ಫ್ರಿಜ್‌ನಲ್ಲಿದ್ದ ಮಾವಿನ ಹಣ್ಣನ್ನು ತೆಗೆದುಕೊಂಡು ಹೋಗಿದ್ದಾನೆ ಎನ್ನತಕ್ಕ ಮಾತನ್ನು ಹೇಳಿದರು. ಆಗ ನಾನು ಅಲ್ಲಿದ್ದ ಆಸಿಸ್ಟೆಂಟ್ ಕಮಿಷನರ್‌ರವರಿಗೆ ಕರೆಸಿ ಹೇಳಿದೆ, ಫ್ರಿಜ್ ಇರತಕ್ಕದ್ದು ಪಿ.ಬಿ.ಯಿ. ಗೆಸ್ಟ್‌ಹೌಸ್‌ನವರಿಗೆ ಸೇರಿದ್ದಾಗಿದೆ ಹೀಗಾದರೆ ಅವರಿಗೆತಕ್ಕ ಮಾವಿನ ಹಣ್ಣನ್ನು ಒಬ್ಬ ಲಾರಿ ಸ್ಟೈವರ್ ಹೇಗೆ ತೆಗೆದುಕೊಂಡು ಹೋಗುವುದು ? ಈ ಪ್ರವೃತ್ತಿ ಹಾಗೆಯೇ ಮುಂದುವರಿಯಬೇಕೆ ? ಎಂದು ಕೇಳಿದಕ್ಕೆ ನನಗೆ ಕೆಲವರು ೮-೧೦ ವರ್ಷಗಳಿಂದಲೂ ಈ ಐ. ಬಿ. ಯಲ್ಲಿ ಇನ್ವೆಟ್ ಆಟ ಆಡಿಕೊಂಡೇ ಹೊಗುತ್ತಾರೆ, ಯಾರಾದರೂ ಫ್ರಿಜ್‌ನಲ್ಲಿರತಕ್ಕ ದ್ದನ್ನು ತೆಗೆದುಕೊಂಡು ಕಾಣದೆ ಹೋಗುತ್ತಿದ್ದಾರೆಂದು ಹೇಳಿದರು. ಆದಕ್ಕೆ ನಾನು ಈ ಐ. ಬಿ. ವಾಚ್‌ಮೆನ್ ಎಷ್ಟು ವರ್ಷದಿಂದ ಇದ್ದಾನೆ ? ಅವನೆಲ್ಲಾ ನಡೆಯುವುದಕ್ಕೆ ಹೆಗೆ ಬಿಟ್ಟ ! ಆದುದರಿಂದ ಮೊದಲು ಅವನನ್ನು ಸಸ್ಪೆಂಡ್ ಮಾಡಿ ಎಂದು ಹೇಳಿದೆ. ಆನಂತರ ಕೆಲವರು ಬೇಡ ಎಂದು

ಹೇಳಿದ್ದಕ್ಕೆ ಎಗ್ಸಿಕ್ಯುಟಿವ್ ಇಂಜಿನಿಯರ್‌ಗೆ ಹೇಳಿದೆ ಒಂದು ದಿವಸ ಮಟ್ಟಿಗಾದರೂ ಅವನನ್ನು ಸಸ್ಪೆಂಡ್ ಮಾಡಿ ಅವನಿಗೆ ಇದರಿಂದ ತಿಳಿಂವಳಿಕೆ ಬರಬೇಕು ಎನ್ನುವ ಉದ್ದೇಶದಿಂದ ಹೇಳಿದೆ. ಈ ಮಾತನ್ನು ಏತಕ್ಕೆ ಹೇಳಿದೆ ಎಂದರೆ ಹಿಂದಕ್ಕೆಲ್ಲಾ ದೊಡ್ಡ ದೊಡ್ಡ ಪ್ರಮುಖರು, ನಾಯಕರು ಮಂದಿ ಇಲ್ಲಿಗೆಲ್ಲಾ ಬಂದಾಗ ಕುಡಿಯುತ್ತಿದ್ದರು, ತಿನ್ನುತ್ತಿದ್ದರು, ಸರಾಯಿ ಬಾಟ್ಲು ಕುಡಿಯುತ್ತಿದ್ದರು, ಆದುದರಿಂದ ಬೇರೆಯವರಂ ಹೊರಗಿನಿಂದ ಯಾರೇ ಬಂದು ಕುಡಿದು ಹೋದರೂ ಕೇಳುತ್ತಿರಲಿಲ್ಲವೆಂದು ತಿಳಿಸಿದರು. ಅದು ಏನೋ ಹಿಂದೆ ಆ ರೀತಿಯಾಗಿ ನಡೆದು ಹೋಗಿದೆ ಆದರೆ ನಮ್ಮ ಜನತಾ ಸರ್ಕಾರ ಬಂದ ಮೇಲೆ ಆ ಪದ್ಧತಿಯನ್ನು ತೆಗೆದು ಹಾಕಬೇಕು ಎನ್ನತಕ್ಕ ನಿರ್ಧಾರವನ್ನು ಮಾಡಿದ್ದೇವೆ. ಅದಕ್ಕಾಗಿ ತಾತ್ವಿಕ ದೃಷ್ಟಿಯಿಂದ, ಸಮಾಜವನ್ನು ಪುನರ್ ಉದ್ಧಾರ ಮಾಡಬೇಕು ಎನ್ನತಕ್ಕ ಉದ್ದೇಶದಿಂದ ೧೯೭೨ ರಿಂದ ಕಾಂಗ್ರೆಸ್ ವಿರುದ್ಧವಾಗಿ ಹೋರಾಟ ಮಾಡಿಕೊಂಡು ಬಂದಿರತಕ್ಕ ವ್ಯಕ್ತಿ ನಾನು...

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ಸೇರುವುದಕ್ಕೆ ಅಪ್ಲಿಕೇಷನ್ ಕೊಟ್ಟಿದ್ದೀರಿ ಏತಕ್ಕೆ ಹೇಳುತ್ತೀರಾ ?

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ನಾನು ಕಾಂಗ್ರೆಸ್ ಸೇರಲು ಅಪ್ಲಿಕೇಷನ್ ಕೊಟ್ಟಿದ್ದನ್ನು ನೀವು ರುಜುವಾತು ಮಾಡಿ ನಾನು ಮಂತ್ರಿ ಪದವಿಗೇ ರಾಜೀನಾಮೆ ಕೊಟ್ಟು ಹೋಗುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ಕಾಂಗ್ರೆಸ್ ಆಫೀಸಿಗೆ ಹೋಗಿ ಹುಡುಕಿಸುತ್ತೇನೆ.

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಹುಡುಕಿಸಿ. ನೀವು ಅದನ್ನು ರುಜುವಾತು ಮಾಡುವುದಾದರೆ ನಾನು ಹೇಳಿದಂತೆ ನಡೆದುಕೊಳ್ಳುತ್ತೇನೆ. ತಾತ್ವಿಕ ಹಿನ್ನೆಲೆಯಿಂದ ನಾನು ಬಂದವನು. ಆದಕ್ಕಾಗಿ ನನ್ನ ಜೀವನವನ್ನೇ ಹಾಳು ಮಾಡಿಕೊಂಡಿದ್ದೇನೆ. ೧೦ ಮಾವಿನ ಹಣ್ಣು ಮುಖ್ಯವಲ್ಲ ಇದರಲ್ಲಿ ತಾತ್ವಿಕ ದೃಷ್ಟಿಯಿಂದ ನಾವು ನೋಡಬೇಕು. ಆ ತಳಹದಿಯ ಮೇಲೆ ನಾವು ವಿಚಾರ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ಅಧ್ಯಕ್ಷರೆ, ಅವರು ತಾತ್ವಿಕವಾಗಿ ಹೇಳಿದ್ದಾರೆ.

(ಗೊಂದಲ)

ಉಪಾಧ್ಯಕ್ಷರು.—ಇದರ ಬಗ್ಗೆ ಕ್ಲಾರಿಫಿಕೇಷನ್ ಆಗತ್ಯವಿಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ಅಧ್ಯಕ್ಷರೇ. ಇವರ ಮನೆಗೆ ಹೋಗಿ ಕ್ಷಮೆ ಕೇಳಿಕೊಂಡಿದ್ದಾರೆ ಎಂದು ಹೇಳಿದರು...

(ಗೊಂದಲ)

ಉಪಾಧ್ಯಕ್ಷರು.—ಇದನ್ನೇ ದೊಡ್ಡದು ಮಾಡಬಾರದು.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ಅಧ್ಯಕ್ಷರೆ, ಅವರು ನಾನು ಹೇಳಿಲ್ಲ ಎಂದು ಹೇಳಲಿ.

(ಗೊಂದಲ)

ಶ್ರೀ ಕೆ. ಬಿ. ಮಲ್ಲಪ್ಪ.—ಅಧ್ಯಕ್ಷರೆ,...

ಶ್ರೀ ಕೆ. ಹೆಚ್ ರಂಗನಾಥ್.—ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಂತ್ರಿಗಳು ಮಾತನಾಡಿದ ಮೇಲೆ ಒಂದು ತೊಂದರೆ ಬಂದಿದೆ. ಮಾನ್ಯ ಲೋಕೋಪಯೋಗಿ ಮಂತ್ರಿಗಳು ಇಲ್ಲೇ ಇದ್ದಾರೆ. ಇನ್ನು ಮುಂದೆ, ಜನತಾ ಸರ್ಕಾರ ಬಂದ ಮೇಲೆ ಯಾವ ಟಿ.ಬಿ.ಯಲ್ಲೂ, ಯಾರೂ ಕುಡಿಯಬಾರದು ಎಂದು ಕಾನೂನು ಏನಾದರೂ ಆಗಿದೆಯೋ ? ಅವರ ಪಕ್ಷದಲ್ಲಿ ಎಲ್ಲರೂ ಕುಡಿಯುವುದನ್ನು ಬಿಡಬೇಕೆಂದು ಏನಾದರೂ ಆಗಿದೆಯೋ ಏನು ಈ ವಿಷಯದ ಬಗ್ಗೆ ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ವಿಶ್ವನಾಥರೆಡ್ಡಿ.—ಬರೇ ಅದೇ ಕೆಲಸ ಆಗಬಾರದು ಎಂದು ಹೇಳಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ಅಧ್ಯಕ್ಷರೆ, ನಾನು ಕೇಳಿದ್ದಕ್ಕೆ ಉತ್ತರ ಬರಲಿಲ್ಲ.

ಉಪಾಧ್ಯಕ್ಷರು.—ಈಗ ನಾನು ಮಲ್ಲಪ್ಪನವರನ್ನು ಮಾತನಾಡಲಿಕ್ಕೆ ಕರೆದಿದ್ದೇನೆ, ದಯವಮಾಡಿ ಎಲ್ಲ ಸದಸ್ಯರು ಕುಳಿತುಕೊಳ್ಳಬೇಕು.

ಶ್ರೀ ಕೆ. ಬಿ. ಮಲ್ಲಪ್ಪ.—ಅಧ್ಯಕ್ಷರೆ, ಇದು ಏನಾಗಿದೆ ಎಂದರೆ, ಹಳ್ಳಿ ಕಡೆಯಲ್ಲಿ ಒಂದು ಗಾದೆ ಹೇಳುತ್ತಾರೆ, ಅದೇನೆಂದರೆ ಹಣ್ಣು ತಿಂದವನು ನುಣಚಿಕೊಂಡ ಸಿಪ್ಪೆ ತಿಂದವನು ಸಿಕ್ಕಿಹಾಕಿಕೊಂಡ ಅಂದಹಾಗೆ ಇವರು ಇಬ್ಬರು ಸಿಕ್ಕಿಕೊಂಡು ಮಾತನಾಡುತ್ತಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ಅಧ್ಯಕ್ಷರೆ ಇದ್ದುದನ್ನು ಇದ್ದ ಹಾಗೆ ಹೇಳಿದರೆ...!

ಉಪಾಧ್ಯಕ್ಷರು.—ಮಾನ್ಯ ಮಲ್ಲಪ್ಪನವರು ಆಫೊತ್ತಿನ ಬೇಡಿಕೆಗಳಿಗೆ ಸಂಬಂಧಪಟ್ಟಂತೆ ಮಾತನಾಡಬೇಕು.

† ಶ್ರೀ ಕೆ. ಬಿ ಮಲ್ಲಪ್ಪ (ಲರಕಲಗೂಡು).—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಇಲ್ಲಿ ಇಟ್ಟಿರತಕ್ಕ ಎಲ್ಲಾ ಬೇಡಿಕೆಗಳನ್ನು ಬೆಂಬಲಿಸುತ್ತಾ ಒಂದೆರಡು ಬೇಡಿಕೆಗಳ ಮೇಲೆ ಎರಡು ಮಾತುಗಳನ್ನು ಆಡಬೇಕೆಂದು ನಿಂತಿದ್ದೇನೆ. ಸ್ವಾಮಿ, ನಾನು ಬಹಳ ನಿಗಾವಹಿಸಿ, ಬಹಳ ಎಚ್ಚರಿಕೆಯಿಂದ ನಮ್ಮ ವಿರೋಧ ಪಕ್ಷದ ನಾಯಕರು ಮತ್ತು ಇತರೆ ಸದಸ್ಯರು ಮಾತನಾಡಿದ್ದನ್ನು ಕೇಳಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಬಂಗಾರಪ್ಪನವರು ಪೆಚ್ಚಿಗಾದಾಗಿ ಮಾತನಾಡುತ್ತಾ, ರಾಮಕೃಷ್ಣ ಹೆಗಡೆಯವರು ಆಶೋತ್ತರಗಳನ್ನು ತೋರಿಸಿ ನಮ್ಮ ಕಡೆಯ ಸದಸ್ಯರನ್ನು ಎಳೆಯುತ್ತಿದ್ದಾರೆ ಪಕ್ಷಾಂತರ ಮಾಡಿಸುತ್ತಿದ್ದಾರೆ. ಎಂದು ಗಂಟೆಗಟ್ಟಲೆ ಆದಸ್ಟೇ ಹೇಳಿದ್ದಾರೆ. ಪಕ್ಷಾಂತರ ನಿಷೇಧ ಕಾಯಿದೆ ಮಂಡಿಸಿರುವವರು ಪಕ್ಷಾಂತರ ಮಾಡಬೇಕೆಂದು ಪ್ರಚೋದನೆ ಮಾಡುವುದು ನಮ್ಮ ಸರ್ಕಾರದ ಧ್ಯೇಯವಲ್ಲ. ನಮ್ಮ ನಾಯಕರಾದ ಹೆಗಡೆಯವರು ಆದನ್ನು ಮಾಡಿದವರೂ ಅಲ್ಲ ಏನಾದರೂ ಸಂದರ್ಭವಿದ್ದರೆ, ಆವರೇ ಆ ಕಡೆ ಬೀಸತ್ತು ಈ ಸರ್ಕಾರ ಒಳ್ಳೆಯ ಕೆಲಸ ಮಾಡಿ ಹೆದೆ. ರಾಮಕೃಷ್ಣ ಹೆಗಡೆಯವರ ನಾಯಕತ್ವ ಇದೆ. ಒಳ್ಳೆಯ ನಾಯಕತ್ವವನ್ನು ನಮ್ಮ ರಾಜ್ಯಕ್ಕೆ ಕೊಡುತ್ತಿದ್ದಾರೆ. ಆದ್ದರಿಂದ ನಾವೇ ಅಲ್ಲಿಗೆ ಹೋಗಿ ಸೇರೋಣ, ಆವರೆ ಕೈ ಬಲಪಡಿಸಿ ರಾಜ್ಯದಲ್ಲಿ ಒಳ್ಳೆಯ ಆಡಳಿತ ಕೊಡೋಣ ಎಂದು ಆವರೇ ನಾದರೂ ಈ ಕಡೆ ಬಂದಿದ್ದರೆ ಆದು ಎಲ್ಲಾ ಆವರಿಗೆ ಬಿಟ್ಟಿದ್ದು. ಆದನ್ನು ಸ್ವಾಗತ ಮಾಡತಕ್ಕದ್ದು ಮಾಡುತ್ತೇವೆ. ಇನ್ನೊಂದು ವಿಷಯ ಏನೆಂದರೆ, ೧೯೭೮ನೇ ಇಸವಿಯಲ್ಲಿ ಜನತಾ ಪಕ್ಷದವರೇ ೫೯ ಜನ ಆರಿಸಿ ಬಂದಿದ್ದವು. ನಾವು ೫೯ ಜನ ಆರಿಸಿ ಬಂದಮೇಲೆ ಆವರು ಸಾಮೂಹಿಕವಾಗಿ ೪೬ ಜನರನ್ನು ಕೆಗೆದುಕೊಂಡು ಬಿಟ್ಟರು ವಿರೋದಿ ಮಾಡಿದರು ಅಧಿಕಾರ ಕೊಟ್ಟರು. ಎಲ್ಲವನ್ನೂ ಪಾಡಿ ಆವರನ್ನು ಜಾತಿ ಕೆಡಿಸಿದರು ಎಂದು ಹೇಳುವ ಹಾಗೆ ಇಲ್ಲ. ಆವರನ್ನು ಆ ಕಡೆ ಎಳೆದುಕೊಂಡು ಮಿನಿಸ್ಟರ್ ಮಾಡಿದರು, ಎಲ್ಲಾ ಸವಲತ್ತು ಕೊಟ್ಟು ಮಾಡಿದಂಥ ಜನ ಇವೊತ್ತು ಪಕ್ಷಾಂತರ ಮಾಡಿಸುತ್ತಿರಿ ಎಂದು ಹೇಳುತ್ತಿದ್ದಾರೆ. ಇನ್ನು ಮಾನ್ಯ ಬಂಗಾರಪ್ಪನವರು ಮಾತನಾಡುತ್ತಾ ಇರುವಾಗ ಬಹಳ ಆವಲೋಕಿಸಿದೆ. ಬಂಗಾರಪ್ಪನವರು ಮೊದಲು ನಮ್ಮ ಜೊತೆಯಲ್ಲಿ ಇದ್ದವರು, ಕಾಂಗ್ರೇಸ್(ಐ) ಬಿಟ್ಟು ಬಂದಮೇಲೆ ಕ್ರಾಂತಿರಂಗಕ್ಕೆ ಸೇರಿದ ಮೇಲೆ ಶ್ರೀ ದೇವರಾಜ್ ಅರಸ್ ಆವರು ತೀರ್ಮಾನಿಸಿದ ಮೇಲೆ ಆವರೇ ಸೆಲೆಕ್ಟ್ ಮಾಡಿದರು, ನಾವಲ್ಲಾ ಹೋಗಿ ಜನತಾ ಪಾರ್ಟಿಯಲ್ಲಿ ಮರ್ಜ್ ಆಗ ಬೇಕು ಎಲೆಕ್ಷನ್ ಬರುತ್ತೆ ಎಂದು.

ಶ್ರೀ ಬಿ. ಸ್ವಾಮಿರಾವ್.—ಅಧ್ಯಕ್ಷರೆ,...

(ಗೊಂದಲ)

ಶ್ರೀ ಕೆ. ಬಿ. ಮಲ್ಲಪ್ಪ.—ಆಧ್ಯಕ್ಷರೆ, ಆವೊತ್ತು ನಡೆದ ಮೀಟಿಂಗ್‌ನಲ್ಲಿ ನಾನು ಇದ್ದೆ. ಕಿಟಕಿ, ಬಾಗಿಲು ಬಳಿ ಸೂರಾರು ಜನ ಹಂಡುಗರನ್ನು ಕರೆದುಕೊಂಡುಬಂದು, ಯಾರು ಬೇಕು, ಬಂಗಾರಪ್ಪ ಬೇಕು, ಯಾರು ಚೀಫ್ ಮಿನಿಸ್ಟರ್ ಆಗಬೇಕು, ಬಂಗಾರಪ್ಪ ಚೀಫ್ ಮಿನಿಸ್ಟರ್ ಆಗಬೇಕು ಎಂದು ಕೂಗಿಸಿದ್ದು ಕೇಳಿದೆ. ನಾನು ಒಳಗಡೆ ಯಾವುದೋ ಒಂದು ಮೂಲೆಯಲ್ಲಿ ಕುಳಿತಿದ್ದೆ. ಆ ತರಹ ಮಾನ್ಯ ಬಂಗಾರಪ್ಪನವರು ಸೃಷ್ಟಿ ಮಾಡಿದ್ದರು. ಕಡೆಗೆ ಆವರೇ ಬಂದು ನಮ್ಮ ಪಾರ್ಟಿ ಆಫೀಸಿನಲ್ಲಿ ಕುಳಿತು ಆನಂತರ ಲೀಡರ್ ಯಾರು ಆಗಬೇಕು ಎಂದಾಗ, ನಾವು ಆವರ ಬಗ್ಗೆ ತೀರ್ಮಾನ ಮಾಡ

ಬೇಕೆಂದು ಆಯಿತು. ಅನಂತರ ಮೂರನೇ ಮಹಡಿಯಲ್ಲಿ ಸೇರಿ ಮಾನ್ಯ ರಾಮಕೃಷ್ಣ ಹೆಗಡೆಯವರು ನಮ್ಮ ನಾಯಕರಾಗಬೇಕೆಂದು ನಮ್ಮ ಸ್ನೇಹಿತರು ಹೇಳಿದರು. ಅವರ ಹೆಸರು ಮೊದಲು ಹೋಗಿದೆ, ಅವರು ಪ್ರಪೋಸ್ ಮಾಡಿದರು, ಅದಕ್ಕೆ ನಾನು ಸೆಕೆಂಡ್ ಮಾಡಿದೆ. ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯ ಮಂತ್ರಿಗಳು ಆಗಬಹುದು ಎಂದು ತೀರ್ಮಾನ ಆಯಿತು. ಸಮಾರಂಭ ಏನೂ ಇಲ್ಲ, ಸಿಂಪಲ್ ಆಗಿ ಆಯಿತು. ಇದು ಆದಮೇಲೆ ನಾನು ಹೊರಗಡೆ ಹೋಗಬೇಕಾಗಿ, ನಾನು ಬಂಗಾರಪ್ಪ ನವರ ಕಡೆಯವರು ಎಂದು ಹೇಳುವುದಿಲ್ಲ, ಕೆಲವರು ಇವನೇ ಶ್ರೀ ರಾಮಕೃಷ್ಣ ಹೆಗಡೆಯರನ್ನು ಪ್ರಪೋಸ್ ಮಾಡಿದ ಎಂದು ಹೇಳಿ, ಕಲ್ಲು ಹೊಡೆದರು.

ಉಪಾಧ್ಯಕ್ಷರು....ಆದರ ಬಗ್ಗೆ ಪತ್ರಿಕೆಯಲ್ಲಿ ಬಂದಿದೆ.

ಶ್ರೀ ಕೆ. ಬಿ. ಮಲ್ಲಪ್ಪ.—ಡೆಪ್ಯುಟಿ ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ನಂಜುಂಡೇಗೌಡರು ನನಗೆ ತುಂಬಾ ಪರಿಚಯ, ಅವರು ನನ್ನನ್ನು ಬಾರೋ ಊಟಕ್ಕೆ ಹೋಗೋಣ ಎಂದು ಕರೆದುಕೊಂಡು ಹೋಗುತ್ತಿದ್ದರು. ಅವರು ಅರಸೀಕೆರೆಯವರು. ಅವರ ಜೊತೆಯಲ್ಲಿ ನಾನು ಹೋಗುವಾಗ ಗುಂಪಿನಲ್ಲಿ ಯಾರೋ ಕಲ್ಲು ಹೊಡೆದರು. ಅದು ನನ್ನ ಎದೆಗೆ ಬಂದು ಬಿದ್ದು ಗಾಯ ಆಯಿತು. ಆಗ ನಂಜುಂಡೇಗೌಡರೆ, ನನ್ನನ್ನ ಆಸ್ಪತೆಗೆ ಕರೆದುಕೊಂಡು ಹೋಗಿ ಮೆಡಿಸಿನ್ ಕೊಡಿಸಿದರು. ಇಂಜೆಕ್ಷನ್ ಕೊಡಿಸಿದರು ಅವರ ಮನೆಗೆ ಹೋಗಿ ಊಟ ಮಾಡಿಕೊಂಡು ಮಲಗಿದ್ದು ಬೆಳಿಗ್ಗೆ ಮತ್ತೆ ಇಂಜೆಕ್ಷನ್ ತೆಗೆದುಕೊಂಡು ನಾಲ್ಕು ದಿವಸ ಸುಧಾರಿಸಿಕೊಂಡು ಬಂದೆ. ಈ ತರಹ ಚಾಕಚಕ್ಯ ಕಲ್ಪರ್ ಇರತಕ್ಕ ಈ ಜನ ಪಕ್ಷಾಂತರಿಗಳಿಗೆ ಗುರುವಾಗಿದ್ದಂಥ ಜನ, ಇವೊತ್ತು ರಾಮಕೃಷ್ಣ ಹೆಗಡೆಯವರನ್ನು ನೋಡಿ ಇವರಿಗೆ ಹೆದರಿಕೆಯಾಗಿದೆ. ಅವರಿಗೆ ಯಾವತ್ತಿ ಹೆದರಿಕೆ ಆಗಿದೆ ಅಂದರೆ ಎಲ್ಲಾದರೂ ಆ ಕಡೆ ಎಳಿದು ಕೊಂಡರೆ, ನಮ್ಮ ಗತಿ ಏನು, ಆಗ ನನ್ನ ಲೀಡರ್‌ಷಿಪ್ ಹೋಗುತ್ತದೆ ಎನ್ನುವ ಭಯದಿಂದ ಹಾಗೆ ಹೇಳುತ್ತಿದ್ದಾರೋ ಅಥವಾ ವಾಸ್ತವವಾಗಿ ನಡೆಯುತ್ತಿದೆಯೋ ಅದನ್ನು ಅವರು ತಿಳಿದುಕೊಳ್ಳಬೇಕು.

೬–೩೦ ಪಿ. ಎಂ.

ಇದನ್ನು ಪಕ್ಷಾಂತರ ಎಂದು ಹೇಳುವುದಕ್ಕೆ ಅವರಿಗೆ ಅಧಿಕಾರವೂ ಇಲ್ಲ. ಆ ರೀತಿಯಾಗಿ ಹೇಳುವಂತಹ ನೈತಿಕ ಹಕ್ಕೂ ಅವರಿಗಿಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇದು ಆದಮೇಲೆ ಇನ್ನು ಒಂದೆರಡು ವಿಚಾರಗಳನ್ನು ಪೋಲೀಸ್ ಇಲಾಖೆಯ ಬಗ್ಗೆ ಹೇಳುವುದಕ್ಕೆ ಬಯಸುತ್ತೇನೆ. ಪೋಲೀಸ್ ಇಲಾಖೆಯ ಬಗ್ಗೆ ಹೇಳುವುದಾದರೆ, ನಮ್ಮ ಅಧಿಕಾರಿಗಳು ಅಂದರೆ ಮೇಲ್ಮಟ್ಟದಲ್ಲಿರುವ ಅಧಿಕಾರಿಗಳು ನಾನು ತಿಳಿದ ಮಟ್ಟಿಗೆ ಸ್ವಲ್ಪ ನಿಷ್ಠೆಯಿಂದ ಕೆಲಸ ಮಾಡುತ್ತಾ ರೆಂಬುದನ್ನು ಅರಿತುಕೊಂಡಿದ್ದೇನೆ. ಆದರೆ ಇದರಲ್ಲಿ ಪೋಸ್ಟ್‌ಗಳನ್ನು ಹೆಚ್ಚಿಗೆ ಮಾಡಿದ್ದೀರಿ. ಡೈರೆಕ್ಟರ್ ಜನರಲ್ ಆಫ್ ಪೋಲೀಸ್ ಹುದ್ದೆಯನ್ನು ಹೋಂಗಾರ್ಡ್ ಇಲಾಖೆಗೂ ಕ್ರಿಯೇಟ್ ಮಾಡಿದ್ದೀರಿ. ಇದರ ಅವಶ್ಯಕತೆ ಇತ್ತೇ ಎಂಬ ಪ್ರಶ್ನೆ ಇದರಲ್ಲಿ ಬರುತ್ತದೆ. ಏಕೆಂದರೆ ಎಕನಾಮಿಕ್ ದೃಷ್ಟಿಯಿಂದ ರಾಜ್ಯದ ಆರ್ಥಿಕ ದೃಷ್ಟಿಯಿಂದ ಈ ಇಲಾಖೆಯನ್ನು ಒಬ್ಬರು ಅಥವಾ ಇಬ್ಬರು ಡೈರೆಕ್ಟರ್ ಜನರಲ್ ಆಫ್ ಪೋಲೀಸ್ ಹುದ್ದೆಗಳಲ್ಲಿರುವ ಅಧಿಕಾರಿಗಳು ನಿರ್ವಹಿಸುವುದಕ್ಕೆ ಆಗುತ್ತಿರಲಿಲ್ಲವೇ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ಪೋಲೀಸ್‌ನವರು ಲಂಚ ತೆಗೆದುಕೊಳ್ಳುತ್ತಾರೆ, ಲಂಚ ಹೆಚ್ಚಾಗಿದೆ. ಪೋಲೀಸ್ ಪೇದೆಗಳು ಕೂಡ ಲಂಚ ತೆಗೆದುಕೊಳ್ಳುತ್ತಾರೆಂಬ ಪ್ರತೀತಿ ಇದೆ. ನಿಜ ಅವರು ಲಂಚ ತೆಗೆದುಕೊಳ್ಳುತ್ತಾರೆ. ಇವತ್ತಿನ ರೇಟು ಎಲ್ಲಿಗೆ ಹೋಗಿದೆ ಎಂದರೆ ಗಗನಕ್ಕೆ ಮುಟ್ಟಿದೆ. ಪೋಲೀಸ್‌ನವರು ಕೂಡ ನಮ್ಮ ಹಾಗೆ ಸರಿಯಾಗಿ, ಪ್ರವಸ್ಥಿತವಾಗಿ ಜೀವನ ಮಾಡಬೇಕಾಗಿದೆ. ಹೆಂಡತಿ, ಮಕ್ಕಳನ್ನು ಸಾಕಬೇಕು. ಇವತ್ತು ಅವರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡಬೇಕಾದಂತಹ ಹಣ ಎಷ್ಟು ಎಂಬುದು ಎಲ್ಲರಿಗೂ ಗೊತ್ತಿರತಕ್ಕಂತಹ ವಿಚಾರ. ಲಂಚ ತೆಗೆದು ಕೊಳ್ಳುತ್ತಾರೆ ಎಂಬುದಾಗಿ ಹೇಳುವುದಕ್ಕೆ ಬದಲಾಗಿ ಅದಕ್ಕೆ ತಕ್ಕ ಸಂಬಳವನ್ನು ಕೊಡದಿದ್ದರೆ ಅವರೇನು ಮಾಡುತ್ತಾರೆ ? ಈ ಮಾತನ್ನು ನಾನು ಹೇಳುವಾಗ ಡಿ.ಜಿ.ಪಿ , ಡಿ.ಐ.ಜಿ., ಎಸ್.ಪಿ., ಹಾಗೂ ಡಿ.ಎಸ್.ಪಿ.ಯವರಿಗೆ ಅವರ ಬಗ್ಗೆ ನಾನು ಹೇಳುತ್ತಿಲ್ಲ. ಆದರೆ ಕೆಳಮಟ್ಟದಲ್ಲಿರತಕ್ಕಂತಹ ಅಧಿಕಾರಿ ಗಳಾದ ಪೋಲೀಸ್ ಪೇದೆಗಳ ಬಗ್ಗೆ ನಾನು ಹೇಳುತ್ತಿದ್ದೇನೆ. ಇದರ ಜೊತೆಗೆ ಯಾರು ಪೋಲೀಸ್ ನವರು ಇದ್ದಾರೆ ಅವರು ಇನ್ನೊಬ್ಬರ ಜೇಬಿಗೆ ಕೈಹಾಕದಹಾಗೆ ಸರಿಯಾದ ಸಂಬಳ ಸಾರಿಗೆ ಕೊಟ್ಟು ಅವರಿಂದ ಸರಿಯಾದ ಸೇವೆಯನ್ನು ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಜೈಲ್ ಬಗ್ಗೆ ಹೇಳುವುದಾದರೆ, ಜೈಲ್ ಐ ಜಿ. ಆಗಿರತಕ್ಕಂತಹವರು ನಮ್ಮ ಸ್ನೇಹಿತರು. ಅವರ ಬಗ್ಗೆ ಹೇಳುವುದಾದರೆ, ಅವರನ್ನು ಮುಖಸ್ತುತಿ ಮಾಡುತ್ತಾರೆಂದು ತಾವು ಯಾರೂ ಭಾವಿಸಬಾರದು. ಬಹಳ ಚೆನ್ನಾಗಿ ಕೆಲಸ ಮಾಡತಕ್ಕಂತಹವರು. ಓಪನ್ ಏರಿಯಾ ಜೈಲ್‌ನ್ನು ಬಹಳ ಚೆನ್ನಾಗಿ ಮಾಡಿದ್ದಾರೆ. ನಾನು ಕೂಡ ಪ್ರತ್ಯಕ್ಷವಾಗಿ ಅದನ್ನು ನೋಡಿದ್ದೇನೆ. ಆದರೆ ಅಲ್ಲಿಗೆ ಸರಿಯಾದ ಸವಲತ್ತುಗಳನ್ನು ಒದಗಿಸಿಲ್ಲ. ಅಲ್ಲಿರತಕ್ಕಂತಹ ಬೈದಿಗಳಿಗೆ ಸಣ್ಣ ಸಣ್ಣ ಕಸುಬನ್ನು ಜೈಲಿನಲ್ಲಿದ್ದಾಗ ಕಲಿಸಿಕೊಡುತ್ತಾರೆ. ಅವಧಿ ಮುಗಿದಾದ ಮೇಲೆ ಆ ಬೈದಿ ಜೈಲಿನಿಂದ ಹೊರಗೆ ಬಂದ ಮೇಲೆ ಒಳ್ಳೆಯ ಸತ್ಪ್ರಜೆಗಳಾಗಿ ಜೀವನ ಮಾಡುವುದಕ್ಕೆ ಅನುಕೂಲವಾಗುವ ರೀತಿಯಲ್ಲಿ ಎಲ್ಲಾ ಸವಲತ್ತುಗಳನ್ನ ಕಲ್ಪಿಸಿಕೊಡಬೇಕು. ಇಲ್ಲದಿದ್ದರೆ ಏನೂ ಪ್ರಯೋಜನವಾಗುವುದಿಲ್ಲವೆಂಬುದು ನನ್ನ ಅಭಿಪ್ರಾಯ. ಹಳ್ಳಿಗಾಡಿನಲ್ಲಿರತಕ್ಕಂತಹವರು ಏನು ಮಾಡುತ್ತಾರೇದರೆ, ನಾವು ಊರಿಗೆ ಹೋದಾಗ ಬೆಳಿಗ್ಗೆ ಎದ್ದರೆ ಸಾಕು, ಯಾರಾದರೊಬ್ಬರು ಬರುತ್ತಾರೆ, ನಮ್ಮಪರನ್ನು ಪೋಲೀಸ್‌ನವರು ಹಿಡಿದುಕೊಂಡು ಹೋಗಿ ಜೈಲಿಗೆ ಹಾಕಿದ್ದಾರೆ, ಅವರನ್ನು ಬಿಡಿಸಿ ಅಂತ ಬರುತ್ತಾರೆ. ಹಳ್ಳಿಗಾಡಿನಲ್ಲಿರುವ ಜೈಲುಗಳು ಅಂದರೆ ನರಕ ಅಂತ ಹೇಳಬಹುದು ..... ಪೋಲೀಸ್ ಠಾಣೆಯಲ್ಲಿರತಕ್ಕಂತಹ ಲಾಕಪ್‌ಗಳನ್ನು ನೋಡುವುದಕ್ಕಾಗುವುದಿಲ್ಲ. ಆ ಮಟ್ಟದಲ್ಲಿವೆ. ಅವುಗಳನ್ನು ಸುಧಾರಣೆ ಮಾಡಬೇಕು. ಲಾಕಪ್‌ಗಳು ರೆವಿನ್ಯೂ ಇಲಾಖೆಯ ಕೈಕೆಳಗೆ ಇದೆ. ಅವರ ಕಂಟ್ರೋಲ್‌ನಲ್ಲಿದೆ. ಈಗ ಅದನ್ನು ತಪ್ಪಿಸಿ ಜೈಲ್ ಇಲಾಖೆಯವರಿಗೆ ಇವುಗಳನ್ನು ವಹಿಸಿಕೊಟ್ಟರೆ ಅವರು ಅವುಗಳ ಮೆಲ್ವಿಚಾರಣೆ ನೋಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ.

ಇನ್ನು ಜಿಲ್ಲೆಯ ಆಡಳಿತದ ವಿಚಾರದಲ್ಲಿ ಎರಡು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಜಿಲ್ಲಾಮಟ್ಟದಲ್ಲಿ ಒಬ್ಬರು ಜಿಲ್ಲೆಯ ಅಭಿವೃದ್ಧಿಯನ್ನು ನೋಡಿಕೊಳ್ಳುವವರು ಮತ್ತೊಬ್ಬರು ಜಿಲ್ಲೆಯ ಆಡಳಿತವನ್ನು ನೋಡಿಕೊಳ್ಳುವ ಜಿಲ್ಲಾಧಿಕಾರಿಗಳು ಇದ್ದಾರೆ. ಇನ್ನೊಬ್ಬರು ವಿಶೇಷ ಜಿಲ್ಲಾಧಿಕಾರಿಯಾಗಿ ಇರುತ್ತಾರೆ. ಇದರ ಜೊತೆಗೆ ಐ.ಆರ್.ಡಿ.ಪಿ.ಗೆ ಅಂತ ಪ್ರತ್ಯೇಕವಾಗಿ ಒಬ್ಬರು ಇದ್ದಾರೆ. ಜಿಲ್ಲಾಧಿಕಾರಿಗಳಿಗೆ ಯಾವುದಾದರು ತಾಲ್ಲೂಕು ಮಟ್ಟದಿಂದ ಏನಾದರೊಂದು ಪ್ರೊಗ್ರಾಂನ್ನು ಕಳುಹಿಸಿದರೆ ಜಿಲ್ಲಾ ಮಟ್ಟದಲ್ಲಿರುವ ಜಿಲ್ಲಾಧಿಕಾರಿಗಳು ಅವರ ಪಾಸಿಟ್ಯೇಜ್ಜೆ ಬದಲಾವಣೆ ಮಾಡಿ ಕೊಟ್ಟಂತಹ ಪಟ್ಟಿಯನ್ನು ತಾಲ್ಲೂಕಿಗೆ ವಾಪಸ್ಸು ಕಳುಹಿಸಿಕೊಡುತ್ತಾರೆ. ಎನ್ ಆರ್. ಇ. ಪಿ.. ಯಲ್ಲಾಗಲೀ ಅಥವಾ ಅಥವಾ ೨೦ ಅಂಶಗಳ ಕಾರ್ಯಕ್ರಮದ ಬಗ್ಗೆ ಯಾಗಲೀ, ಅಥವಾ ಸ್ಕೇರ್‌ಸಿಟಿ ಬಗ್ಗೆಯಾಗಲೀ, ತಾಲ್ಲೂಕು ಮಟ್ಟದಲ್ಲಿ ಸಭೆಗಳನ್ನು ಮಾಡಿ, ತಾಲ್ಲೂಕಿನಲ್ಲಿ ಇಂಥಿಂಥ ಕೆಲಸಗಳು ಆಗಬೇಕೆಂದು ಒಪ್ಪಿಗೆಗಾಗಿ ಜಿಲ್ಲಾಧಿಕಾರಿಗಳವರಿಗೆ ಕಳುಹಿಸಿಕೊಟ್ಟರೆ. ನಾವು ಕಳುಹಿಸಿಕೊಟ್ಟಂತಹ ಪಟ್ಟಿಯಲ್ಲಿ ಅಲ್ಲೊಂದು ಇಲ್ಲೊಂದು ಆಯ್ಕೆ ಮಾಡಿ, ಪಟ್ಟಿಯನ್ನು ಅಪ್ರೂವ್ ಮಾಡಿ ಕಳುಹಿಸಿಕೊಡುತ್ತಾರೆ. ಇದರಿಂದ ಏನಾಗುತ್ತದೆಂದರೆ ಯಾವ ಹಳ್ಳಿಯಲ್ಲಿ ಕೆಲಸಗಳಾಗಬೇಕಾದ ಅಗತ್ಯವಿರುತ್ತದೋ ಅಂತಹ ಹಳ್ಳಿಯನ್ನೇ ಅವರು ಬಿಟ್ಟುಬಿಟ್ಟಿರುತ್ತಾರೆ. ಸ್ಥಳಕ್ಕನುಗುಣವಾಗಿ ಕೆಲಸವನ್ನು ತೆಗೆದುಕೊಳ್ಳಿ ಅಂತ ಹೇಳುವುದಿಲ್ಲ. ಇದರಿಂದ ಏನಾಗುತ್ತಿದೆ ಎಂದರೆ ಯಾರಿಗೆ ನಿಜವಾಗಿ ಕೆಲಸ ಬೇಡವೋ ಅಂತಹವರಿಗೆ ಕೆಲಸ ಸಿಕ್ಕುತ್ತದೆ. ಬಾಕಿಯವರಿಗೆ ಕೆಲಸವೇ ಸಿಕ್ಕುವುದಿಲ್ಲ. ಆದ್ದರಿಂದ ತಾಲ್ಲೂಕು ಮಟ್ಟದಲ್ಲಿ ಸ್ಥಳೀಯ ಆಗತ್ಯಕ್ಕನುಸಾರವಾಗಿ, ರಿಲೀಫ್ ವರ್ಕ್ಸ್ ಆಗಲಿ, ಅಥವಾ ೨೦ ಅಂಶಗಳ ಕಾರ್ಯಕ್ರಮದ ಬಗ್ಗೆ ಯಾಗಲೀ ಮಂಜೂರಾತಿಗಾಗಿ ಜಿಲ್ಲಾ ಮಟ್ಟದಲ್ಲಿರುವ ಅಧಿಕಾರಿಗಳಿಗೆ ಏನು ತಾಲ್ಲೂಕು ಮಟ್ಟದಿಂದ ಕಳುಹಿಸಿದಂತಹ ಪ್ರಪೋಸಲ್ ಇರುತ್ತದೆ ಅದನ್ನು ಅಪ್ರೂವ್ ಮಾಡಿ. ಅಲ್ಲಿಯ ಸ್ಥಳದ ಬೇಡಿಕೆಗನುಸಾರವಾಗಿ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುವಂತೆ ಸೂಕ್ತ ಆದೇಶವನ್ನು ಸಂಬಂಧಪಟ್ಟವರಿಗೆ ತಿಳಿಸಬೇಕೆಂದು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಜಿಲ್ಲೆಗಳಲ್ಲಿರುವ ಉಪ ವಿಭಾಗದ ಬಗ್ಗೆ ಹೇಳುವುದಾದರೆ, ಎರಡು ಅಥವಾ ಮೂರು ತಾಲ್ಲೂಕುಗಳನ್ನು ಸೇರಿಸಿ ಉಪ ವಿಭಾಗ ಅಂತ ಮಾಡಿ ಅಲ್ಲಿಗೆ ಒಬ್ಬರು ಉಪ ವಿಭಾಗಾಧಿಕಾರಿಯನ್ನು ನೇಮಕ ಮಾಡಿರುತ್ತೀರಿ ನಮ್ಮ ಅರಕಲಗೂಡು ತಾಲ್ಲೂಕನ್ನು ಸಕಲೇಶಪುರ ಉಪ ವಿಭಾಗಕ್ಕೆ ಬಹಳ ಹಿಂದೆಯೇ ಸೇರಿಸಿಬಿಟ್ಟಿದ್ದಾರೆ. ಇದರಿಂದ ಏನು ತೊಂದರೆಯಾಗಿದೆ ಎಂದರೆ, ನಮ್ಮ ತಾಲ್ಲೂಕಿಗೆ ಸಂಬಂಧಪಟ್ಟ ಯಾವುದಾದರೊಂದು ಕೆಲಸಕ್ಕೆ ಉಪ ವಿಭಾಗಾಧಿಕಾರಿಯವರಲ್ಲಿಗೆ ಹೋಗಬೇಕಾದರೆ,

ಹಾಸನಕ್ಕೆ ಬರಬೇಕು. ಹಾಸನದಲ್ಲಿ ಒಂದು ದಿವಸ ಇರಬೇಕು. ಅಲ್ಲಿಂದ ಬೆಳಿಗ್ಗೆ ಎದ್ದು ಬಸ್ಸಿನಲ್ಲಿ ಸಕಲೇಶಪುರಕ್ಕೆ ಹೋಗಬೇಕು. ನಮ್ಮ ಅದೃಷ್ಟಕ್ಕೆ ಅಸಿಸ್ಟೆಂಟ್ ಕಮೀಷನರ್ ಆ ದಿವಸ ಊರಲ್ಲಿ ಇದ್ದರೆ ನಮ್ಮ ಕೆಲಸ ಆಗುತ್ತದೆ. ಇಲ್ಲ ಅಂದರೆ ಆವತ್ತು ಅಲ್ಲಿಯೇ ಉಳಿಯಬೇಕು. ಈ ರೀತಿ ಮೂರು–ನಾಲ್ಕು ದಿವಸಗಳು ಒಂದು ಕೆಲಸಕ್ಕಾಗಿ ಕಳೆದು ಹೋಗುತ್ತವೆ. ಆದ್ದರಿಂದ ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಈಗ ಇರತಕ್ಕಂತಹ ಸಕಲೇಶಪುರ ಉಪ ವಿಭಾಗವನ್ನು ಹಾಸನಕ್ಕೆ ವರ್ಗ ಮಾಡಿ. ಅಂದರೆ ಸಕಲೇಶಪುರ ಉಪ ವಿಭಾಗ ಅಂತಲೇ ಬೇಕಾದರೆ ಕರೆಯಿರಿ. ಆದರೆ ಅವರ ಕಛೇರಿಯನ್ನು ಹಾಸನಕ್ಕೆ ಬದಲಾವಣೆ ಮಾಡಿ. ಆದು ಆಗದಿದ್ದರೆ ನಮ್ಮ ತಾಲ್ಲೂಕನ್ನಾದರೂ ಹಾಸನ ಉಪ ವಿಭಾಗಕ್ಕೆ ಸೇರಿಸಿ ಎಂದು ಸಲಹೆ ಮಾಡುತ್ತೇನೆ.

ಮಂತ್ರೊಂದು ವಿಚಾರವೇನೆಂದರೆ, ಉಪ ವಿಭಾಗಕ್ಕೆ ಅಸಿಸ್ಟೆಂಟ್ ಕಮೀಷನರ್‌ಗಳನ್ನು ನೇಮಕ ಮಾಡುತ್ತಾರೆ. ಈಚೆಗೆ ಉಪ ವಿಭಾಗಕ್ಕೆ ಐ.ಎ.ಎಸ್.ನ ಅಸಿಸ್ಟೆಂಟ್ ಕಮೀಷನರ್‌ಗಳನ್ನು ಹಾಕುತ್ತಿದ್ದಾರೆ. ಅವರಿಗೆ ಇಂಗ್ಲೀಷ್ ಬಿಟ್ಟರೆ ಕನ್ನಡ ಬರುವುದಿಲ್ಲ. ಕನ್ನಡ ಬಂದರೂ ಅರ್ಧಬರ್ಧ ಮಾತ್ರ ಬರುತ್ತದೆ. ನಮಗೆ ಇಂಗ್ಲೀಷ್ ಬರುವುದಿಲ್ಲ. ಅವರಿಗೆ ಕನ್ನಡ ಬರುವುದಿಲ್ಲ ನಾವು ಹೇಳಿದ್ದು ಅವರಿಗೆ ತಿಳಿಯುವುದಿಲ್ಲ. ಅವರು ಹೇಳಿದ್ದು ನಮಗೆ ತಿಳಿಯುವುದಿಲ್ಲ. ಹೀಗಿದ್ದರೂ ಕೂಡ ಅವರು ಭೂನ್ಯಾಯ ಮಂಡಲಿಯ ಅಧ್ಯಕ್ಷರೂ ಬೇರೆ ಆಗಿರುತ್ತಾರೆ. ಭೂನ್ಯಾಯ ಮಂಡಲಿಯಲ್ಲಿ ಮಾಡುವಂತಹ ತೀರ್ಮಾನವನ್ನು ಕನ್ನಡದಲ್ಲಿ ಮಾಡುತ್ತಿದ್ದಾರೆ. ಆದರೆ ತೀರ್ಮಾನ ಮಾಡುವುದಕ್ಕೆ ಮುಂಚೆ ನಡೆಯಂತಕ್ಕಂತಹ ವಾಗ್ವಾದವನ್ನು ಕನ್ನಡದಲ್ಲಿ ನೋಟ್ ಮಾಡಿಕೊಳ್ಳಬೇಕಾಗುತ್ತದೆ. ಆದರೆ ಅಧ್ಯಕ್ಷರಾಗಿರುವಂತಹ ಐ.ಎ.ಎಸ್. ಅಸಿಸ್ಟೆಂಟ್ ಕಮೀಷನರ್ ರವರು ಏನು ಮಾಡುತ್ತಿದ್ದಾರೆಂದರೆ ಅವರ ಸ್ಟೆನೋವನ್ನು ಕರೆದು ನೋಟ್ ಮಾಡಿಕೊಳ್ಳಿ ಎಂಬುದಾಗಿ ಹೇಳುತ್ತಾರೆ. ನಂತರ ಟೈಪ್ ಮಾಡಿದ ಕರಡಿನ ಮೇಲೆ ಸಹಿ ಮಾಡಿ ತೀರ್ಮಾನ ಮಾಡುತ್ತಾರೆ. ಆದರೆ ಈ ಕೇಸ್‌ನಲ್ಲಿ ಆದಂತಹ ತೀರ್ಮಾನದ ವಿರುದ್ಧ ಯಾರಾದರೂ ಹೈಕೋರ್ಟಿಗೆ ಹೋಗುತ್ತಾರೆ. ಆವಾಗ ಹೈಕೋರ್ಟಿನವರು ಏನು ಅಬ್ಜರ್ವ್ ತೆಗೆಯುತ್ತಾರೆಂದರೆ, ಭೂನ್ಯಾಯ ಮಂಡಲಿಯಲ್ಲಿ ಆದಂತಹ ತೀರ್ಮಾನ ಅಧ್ಯಕ್ಷರ ಕೈ ಬರವಣಿಗೆಯಲ್ಲಿಲ್ಲ; ಎಂಬ ಒಂದೇ ಕಾರಣದಿಂದ ಮತ್ತೆ ವಾಪಸ್ಸು ಹಾಕಿ, ಈ ಕೇಸ್‌ನ್ನು ಮತ್ತೆ ರಿಮೇಂಡ್ ಮಾಡುತ್ತಾರೆ. ಇಂತಹ ಕೇಸ್‌ಗಳು ಬಹಳಷ್ಟು ಆಗಿವೆ. ಈಗ ಭೂನ್ಯಾಯ ಮಂಡಲಿಯಲ್ಲಿ ಉಳಿದಿರತಕ್ಕಂತಹ ಬಹುತೇಕ ಕೇಸುಗಳು ಇಂತಹವುಗಳೇ ಆಗಿರುತ್ತವೆ. ಆದ್ದರಿಂದ ಬಹುತೇಕ ಕನ್ನಡ ಬಲ್ಲಂಥ ಅಸಿಸ್ಟೆಂಟ್ ಕಮೀಷನರ್ ಯಾರು ಇದ್ದಾರೆ, ಅಂತಹವರನ್ನೇ ಎಲ್ಲಾ ಸಬ್ ಡಿವಿಜನ್‌ಗಳಿಗೆ ನೇಮಕ ಮಾಡಬೇಕೆಂದು ಹೇಳುತ್ತೇನೆ. ಇನ್ನು ನಾನಾ ವಿಚಾರಗಳ ಬಗ್ಗೆ ಮಾತನಾಡ ಬೇಕೆಂದಿದ್ದೇನೆ. ಆದರೆ ಸಮಯದ ಅಭಾವದಿಂದ ನನ್ನ ಮಾತುಗಳನ್ನು ಮುಗಿಸಬೇಕಾಗಿದೆ.

ಇವತ್ತು ಏನು ನಮ್ಮ ಜನತಾ ಪಾರ್ಟಿ ಅಧಿಕಾರಕ್ಕೆ ಬಂದಿದೆ. ಅಧಿಕಾರಕ್ಕೆ ಬರುವುದಕ್ಕಿಂತ ಮುಂಚೆ ಏನೊಂದು ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿತ್ತು, ಅದೇ ರೀತಿ ನಮ್ಮ ಸರ್ಕಾರ ಕೆಲಸ ಮಾಡಿಕೊಂಡು ಹೋಗುತ್ತಿದೆ ಎಂದು ಧೈರ್ಯದಿಂದ, ಎದೆಮುಟ್ಟಿ ಕೊಂಡು ಹೇಳಿಕೊಳ್ಳತಕ್ಕಂತಹ ಹೆಮ್ಮೆ ನಮಗಿದೆ ಎಂದು ಹೇಳುತ್ತಿದ್ದೇನೆ: ನಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಮೊದಲನೆಯದು ಜನಗಳಿಗೆ ಅಧಿಕಾರ. ಅದರ ಸಂಬಂಧವಾಗಿ ಈವಾಗ ನಮ್ಮ ಪಂಚಾಯಿತಿ ರಾಜ್ ಬಿಲ್ಲು, ಹಾಗೂ ಜಿಲ್ಲಾ ಪರಿಷತ್ತಿನ ಬಿಲ್ಲು ಬಂದಿದೆ. ಆ ಬಿಲ್ಲು ಮಂಜೂರಾದರೆ, ನಮ್ಮ ರಾಜ್ಯದಲ್ಲಿರುವ ಜನಗಳಿಗೇ ಅಧಿಕಾರ ಕೈಗೆ ಬರುತ್ತದೆ. ಅದೇ ರೀತಿ ಪುರಸಭೆಗಳಿಗೆ ಚುನಾವಣೆಗಳನ್ನು ನಡೆಸುತ್ತೇವೆಂದು ಹೇಳಿದ್ದೇವೆ. ಆ ವಿಚಾರದಲ್ಲಿ ಹೇಳುವುದಾದರೆ, ಯಾರೂ ಹಿಂದೆ ೩೬ ವರ್ಷಗಳಿಂದ ಮಾಡದೇ ಇರತಕ್ಕಂತಹ ಮಹತ್ತರವಾದ ಕೆಲಸವನ್ನು ಮಾಡಿದ್ದೇವೆ. ೧೮ ವರ್ಷ ವಯಸ್ಸಿನವರಿಗೂ ಕೂಡ ಓಟು ಮಾಡತಕ್ಕಂತಹ ಹಕ್ಕನ್ನು ಕೊಟ್ಟಿರುವುದು ನಮ್ಮ ಜನತಾ ಸರ್ಕಾರವೆಂದು ಬಹಳ ಹೆಮ್ಮೆಯಿಂದ ಹೇಳಿಕೊಳ್ಳಬಹುದು.

ಇನ್ನು ನಮ್ಮ ಸ್ನೇಹಿತರಾದ ಜೆ.ಡಿ. ನೋಮಪ್ಪನವರು ಹೆಣ್ಣು ಮಕ್ಕಳ ಬಗ್ಗೆ ಬಹಳವಾಗಿ ಹೇಳಿದರು. ಅವರು ಇದ್ದಿದ್ದರೆ ಚೆನ್ನಾಗಿರುತ್ತಿತ್ತು. ೫೦ ಪರ್ಸೆಂಟ್ ಹೆಣ್ಣು ಮಕ್ಕಳು ಈ ರಾಜ್ಯದಲ್ಲಿ ಏನು ಇದ್ದಾರೆ ಅವರಿಗೆ ನಾವು ಅಧಿಕಾರವನ್ನು ಕೊಟ್ಟಿದ್ದೇವೆ. ಕಾಂಗ್ರೆಸ್ ನವರು ೩೬ ವರ್ಷಗಳ ಕಾಲ ಈ ರಾಜ್ಯವನ್ನು ಆಳಿದರು. ಆದರೂ ಕೂಡ ಇದರ ಬಗ್ಗೆ ಯೋಚನೆಯನ್ನೇ ಮಾಡಿರಲಿಲ್ಲ.

ಹೆಣ್ಣು ಮಕ್ಕಳಿಗೆ ಅಧಿಕಾರವನ್ನು ಕೊಡಬೇಕೆಂದು, ಪ್ರಾಶಸ್ತ್ಯವನ್ನು ಕೊಡಬೇಕೆಂದು, ಹೆಚ್ಚಿನದಾಗಿ ಪರ್ಸೆಂಟೇಜನ್ನು ಕೊಡಬೇಕೆಂದು ಹೇಳಿ ಆಪರು ಇದುವರೆವಿಗೂ ಕೂಡ ಯೋಚನೆಯನ್ನೇ ಮಾಡಿರಲಿಲ್ಲ. ಪ್ರಥಮತಃ ಜನತಾ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಹೆಣ್ಣು ಮಕ್ಕಳಿಗೆ ೩೦ ಪರ್ಸೆಂಟ್ ನಷ್ಟಾದರೂ ಪ್ರಾಶಸ್ತ್ಯವನ್ನು ಕೊಡಬೇಕೆಂದು ಹೇಳಿ ಆಯಿತು. ಆನಂತರ ೨೬ ಪರ್ಸೆಂಟ್‌ನ್ನಾದರೂ ಕೊಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳು ಹಠ ಮಾಡಿದ್ದರಿಂದ ೨೦ ಪರ್ಸೆಂಟ್ ಕೊಟ್ಟಿರತಕ್ಕಂಥದ್ದು ಜಾಸ್ತಿಯೇ ಎಂದು ನಮ್ಮ ವೀರಪ್ಪ ಮೊಯ್ಲಿ ಯವರು ಹೇಳಬಹುದಾಗಿತ್ತು. ತಾವು ೨೦ ಪರ್ಸೆಂಟ್ ಕೊಟ್ಟಿದ್ದೀರಿ ಪರವಾಗಿಲ್ಲ, ಆಷ್ಟಾದರೂ ಮಾಡಿದರಲ್ಲವೆಂದು ಹೇಳಬಹುದಾಗಿತ್ತು. ಆವರು ಆದನ್ನು ಹೇಳಲಿಲ್ಲ. ನಮ್ಮನ್ನು ಜಾಡ್ಡಿಸಿ ಜಗ್ಗಿದ್ದು, ಅದು ಮಾಡಲಿಲ್ಲ. ಇದು ಮಾಡಲಿಲ್ಲವೆಂದು ಆವರು ಹೇಳಿದರು ಬಹಳ ಸಂತೋಷ ಆವರು ಯುವಕರು, ಬಹಳ ಚೆನ್ನಾಗಿ ಮಾತನಾಡುತ್ತಾರೆ. ನಾವೂ ಕೂಡ ೬ ವರ್ಷಗಳಿಂದ ಇಲ್ಲಿ ಕುಳಿತು ಕೆಲಸ ಮಾಡುತ್ತಿದ್ದೇವೆ. ಆವರು ಬಹಳ ಚೆನ್ನಾಗಿ ಭಾಷಣವನ್ನು ಮಾಡುತ್ತಾರೆ. ಆದ್ದರಿಂದ ನಾನು ಈ ಡಿಮ್ಯಾಂಡ್ ಏನು ಇದೆ ಅದನ್ನು ಬೆಂಬಲಿಸುತ್ತಾ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಪಿ. ಡಿ. ಗೋವಿಂದರಾಜ್ (ಶಾಂತಿನಗರ) —ಸನ್‌ಮಾನ್ಯ ಸಭಾಧ್ಯಕ್ಷರೇ. ಮಾನ್ಯ ಮುಖ್ಯ ಮಂತ್ರಿಗಳು ಇಟ್ಟಿರತಕ್ಕಂಥ ಎಲ್ಲ ಬೇಡಿಕೆಗಳನ್ನು ನಾನು ಸಂಪೂರ್ಣವಾಗಿ ಬೆಂಬಲಿಸುತ್ತಾ ಕೆಲವಾರು ಸಲಹೆಗಳನ್ನು ಕೊಡಲು ಇಚ್ಛೆಪಡುತ್ತೇನೆ.

ಸ್ವಾಮಿ ಮಾನ್ಯ ವೀರಪ್ಪನೊಯಿಲ್ಲಿಯವರು ಬಹಳ ಚೆನ್ನಾಗಿ ಮಾತನಾಡಿದರು. ಆವರ ಕಾಲ ದಲ್ಲಿ ಫುಟ್‌ಬಾಲ್ ಆಸೋಸಿಯೇಷನ್‌ಗೆ ೩೦ ಲಕ್ಷ ರೂಪಾಯಿಗಳನ್ನು ಸಾಲ ಕೊಟ್ಟಿದ್ದಾರೆ. ಆ ಸಾಲ ವನ್ನು ಕೊಟ್ಟಿರುವುದಕ್ಕೆ ಏನು ಅಗ್ರಿಮೆಂಟ್ ಕೂಡ ಮಾಡಿಕೊಂಡಿಲ್ಲ. ಅದಕ್ಕೆ ಇಂಟರೆಸ್ಟ್ ಕೂಡ ಇಲ್ಲ. ಏನೂ ಇಲ್ಲ. ಹಿಗೆ ನಮ್ಮ ಲಾ ಮಿನಿಸ್ಟರ್ ಕೂಡ ಆ ವಿಷಯದ ಬಗ್ಗೆ ಎಷ್ಟೋ ಬಾರಿ ಮಾತನಾಡಿದ್ದಾರೆ ಮಾನ್ಯ ವೀರಪ್ಪ ಮೊಯಿಲ್ಲಿಯವರು ಏನು ಕ್ರಮ ತೆಗೆದುಕೊಳ್ಳಲಿಲ್ಲ. ಮೂವತ್ತು ಲಕ್ಷ ರೂಪಾಯಿ ಹೇಗೆ ಸ್ಯಾಂಕ್ಷನ್ ಮಾಡಿದ್ದು ಎಂದು ನಾನು ಕೇಳುತ್ತಿದ್ದೇನೆ. ಸ್ವಾಮಿ, ಆವರ ಹತ್ತಿರ ಆ ಹಣವನ್ನು ಕಲೆಕ್ಟ್ ಮಾಡಬೇಕು. ಫುಟ್‌ಬಾಲ್ ಗ್ರೌಂಡ್‌ನ್ನು ಲೀಸ್ ಕಾರ್ಪೊರೇಷನ್ ನವರಿಗೆ ಕೊಟ್ಟಿದ್ದಾರೆ. ಮತ್ತು ಗ್ರಾಂಟ್ ಕೂಡ ಕೊಟ್ಟಿದ್ದಾರೆ. ಈ ರೀತಿ ಗ್ರಾಂಟ್ ಕೊಟ್ಟಿರುವುದರಲ್ಲಿ ಅರ್ಧಭಾಗ ಕೂಡ ಆಗಿಲ್ಲ ಸಾಲ ಕೊಟ್ಟಿರುವುದಕ್ಕೆ ಡಾಕ್ಯುಮೆಂಟ್ಸ್ ಇಲ್ಲ. ಗ್ರಾಂಟ್ ಕೊಟ್ಟಿರುವುದರಲ್ಲಿ ಅರ್ಧಭಾಗದಷ್ಟು ಕೆಲಸವೂ ಕೂಡ ಆಗಿಲ್ಲ ಈ ರೀತಿ ಹಿಂದೆ ಮಾಡಿಬಿಟ್ಟು ಇವತ್ತು ನಮ್ಮ ಮಾನ್ಯ ಮುಖ್ಯಮಂತ್ರಿಗಳ ಮೇಲೆ ಮಾತನಾಡುತ್ತಿದ್ದಾರೆ. ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಸ್ವಾಮಿ ಮತ್ತೊಂದು ವಿಚಾರ ಪೋಲೀಸ್ ಡಿಪಾರ್ಟ್‌ಮೆಂಟ್‌ನಲ್ಲಿ ಇರತಕ್ಕಂಥ ಮೇಲ್ ಅಧಿಕಾರಿಗಳು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಸ್ವಾಮಿ ಮೊನ್ನೆ ನಮ್ಮ ಡಿವಿಜನ್‌ನಲ್ಲಿ ಒಂದು ಕಳ್ಳತನವಾಯಿತು. ಈ ಒಂದು ವಿಷಯ ಬೆಳಿಗ್ಗೆ ೬ ಗಂಟೆಗೆ ನನಗೆ ಗೊತ್ತಾಯಿತ್ತು. ಆರುವರೇ ಗಂಟೆಗೆ ನಾನು ಡಿ ಸಿ. ಪಿ.ಗೆ ಇನ್‌ಫರ್‌ಮೇಷನ್ ಕೊಟ್ಟೆ, ೮ ಗಂಟೆಯೊಳಗೆ ಡಿ.ಸಿ. ಪಿ. ಕ್ರೈಮ್‌ನವರು ಅದನ್ನು ಕಂಡುಹಿಡಿದುಬಿಟ್ಟರು. ಆವರಿಗೆ ಈ ಸಮಯದಲ್ಲಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಮತ್ತೊಂದು ವಿಚಾರ ನಮ್ಮ ಡಿ.ಸಿ.ಪಿ ಕ್ರೈಮ್ ಲಾ ಅಂಡ್ ಆರ್ಡರ್‌ರವರು ನಮ್ಮ ಹರಿಜನರಿಗಾಗಿ ಒಂದು ಪರ್ಮಿಷನ್ ಇಟ್ಟಿದ್ದಾರೆ. ನಾನು ಒಂದು ತಿಂಗಳ ಹಿಂದೆ ಒಂದು ಮನವಿ ಯನ್ನು ಮಾನ್ಯ ಮುಖ್ಯಮಂತ್ರಿಯವರಿಗೆ ಕೊಟ್ಟಿದ್ದೆ. ಆ ಮನವಿಯ ಬಗ್ಗೆ ಏನೂ ಕಾರ್ಯಕ್ರಮ ತೆಗೆದುಕೊಳ್ಳಲಿಲ್ಲ. ಕೊನೆಗೆ ನಾನೇ ಹೋಗಿ ಮಾನ್ಯ ಕಮಿಷನರ್ ರವರಿಗೆ ಮನವಿ ಮಾಡಿಕೊಂಡೆ. ತಕ್ಷಣವೇ ಆವರು ಕ್ರಮ ತೆಗೆದುಕೊಂಡು ಆವರಿಗೆ ಸಹಾಯ ಮಾಡಿದ್ದಾರೆ. ಅದೇರೀತಿಯಲ್ಲಿ ನಮ್ಮ ಡಿ.ಸಿ.ಪಿ. ಯವರು ಕನಕಪುರದ ಎಲೆಕ್ಷನ್ ಟೈಮ್‌ನಲ್ಲಿ ಒಬ್ಬರು ಇನ್‌ಸ್ಪೆಕ್ಟರ್ ಬಂದು ೫ ಲಕ್ಷ ರೂಪಾಯಿ ಗಳ ಸಾಮಾನುಗಳನ್ನು ಸೀಸ್ ಮಾಡಿಕೊಂಡು ಹೋದರು. ಸೀಸ್ ಆದದ್ದಕ್ಕೆ ದಾಖಲೆಗಳಿಲ್ಲ. ಮಹಜರೂ ಕೂಡ ಮಾಡಿಲ್ಲ ಹಾಗೆಯೇ ತೆಗೆದುಕೊಂಡು ಹೋದರು. ೧೫ ದಿವಸಗಳು ಆದಮೇಲೆ ಈ ರೀತಿ ಮಾಡಿರುತ್ತಾರೆ. ಮಹಜರ್ ಕೂಡ ಮಾಡಿಲ್ಲ, ನಮ್ಮ ಹತ್ತಿರ ದಾಖಲೆಗಳು ಇಲ್ಲವೆಂದು ಹೇಳಿದಮೇಲೆ ಡಿ.ಸಿ.ಪಿಯವರು ತಕ್ಷಣ ೧೫ ದಿವಸಗಳ ಒಳಗೆ ಸಾಮಾನುಗಳನ್ನು ವಾಪಸ್ ಕೊಡಿಸಿ ಕೊಟ್ಟರು.

ಸ್ವಾಮಿ, ನಮ್ಮ ಡಿವಿಜನ್‌ನಲ್ಲಿ ಎಲೆಕ್ಷನ್ ಟೈಮ್‌ನಲ್ಲಿ ಕೇವಲ ಒಬ್ಬ ಸಬ್‌ಇನ್ಸ್‌ಪೆಕ್ಟರ್ ಕಾಂಗ್ರೆಸ್ ಪಾರ್ಟಿಯ ಪೋಸ್ಟರ್ಸ್‌ಗಳನ್ನು ಹಂಚಿರಬ್ತಾರೆ, ಬ್ಯಾನರ್ಸ್‌ನ್ನು ಕಟ್ಟಿಸಿದ್ದಾರೆ. ಇದನ್ನು ನಾವು ಎಷ್ಟೋ ಸಾರಿ ಪಬ್ಲಿಕ್ ಮೀಟಿಂಗ್‌ನಲ್ಲಿ ಕೂಡ ಹೇಳಿರುತ್ತೇವೆ ಆದರೆ ಆ ಆಫೀಸರನ್ನು ವಿಚಾರಣೆ ಮಾಡತಕ್ಕಂಥ ಕೆಲಸ ಮಾಡಲಿಲ್ಲ. ಡಿ.ಸಿ.ಪಿ. ಕಾರ್ತಿಕೇಯನ್‌ರವರ ಮೇಲೆ ಕ್ರಮ ತೆಗದುಕೊಂಡಂಥ ವರು ಆದೇರೀತಿ ಈ ಒಂದು ಸಬ್‌ಇನ್ಸ್‌ಪೆಕ್ಟರ್ ಮೇಲೆ ಕ್ರಮ ತೆಗೆದುಕೊಂಡಿದ್ದರೆ ನಾನು ಬಹಳ ಸಂತೋಷಪಡುತ್ತಿದ್ದೆ. ಏನು ಕ್ರಮ ತೆಗೆದುಕೊಳ್ಳದಿದ್ದಕ್ಕಾಗಿ ಬಹಳ ವಿಷಾದಿಸುತ್ತೇನೆ.

ಸ್ವಾಮಿ, ನಮ್ಮ ಡಿವಿಜನ್‌ನಲ್ಲಿ ೫ ಪೋಲೀಸ್ ಸ್ಟೇಷನ್‌ಗಳು ಇರುತ್ತವೆ. ಐದು ಪೋಲೀಸ್ ಸ್ಟೇಷನ್‌ಗಳಿಗೆ ಒಬ್ಬ ಸರ್ಕಲ್ ಇನ್ಸ್‌ಪೆಕ್ಟರ್ ಕೆಲಸ ಮಾಡಲಿಕ್ಕೆ ಸಾಧ್ಯನೇ ಎಂಬ ಆಲೋಚನೆ ಮಾಡ ಬೇಕು. ೫ ಪೋಲೀಸ್ ಸ್ಟೇಷನ್‌ಗೆ ಬೇರೆ ಕಡೆ ಮದ್ರಾಸ್ ಕಡೆಯಲ್ಲಿಯಾಗಲಿ, ಡೆಲ್ಲಿಯಲ್ಲಿಯಾಗಲಿ ಕ್ರೈಮ್‌ಗೆ ಒಬ್ಬರು ಇನ್ಸ್‌ಪೆಕ್ಟರ್, ಲಾ ಆಂಡ್ ಆರ್ಡರ್‌ಗೆ ಒಬ್ಬರು ಇನ್ಸ್‌ಪೆಕ್ಟರ್, ಟ್ರಾಫಿಕ್‌ಗೆ ಒಬ್ಬರು ಇನ್ಸ್‌ಪೆಕ್ಟರ್, ಒಬ್ಬರು ಸರ್ಕಲ್ ಇನ್ಸ್‌ಪೆಕ್ಟರ್ ಇರುತ್ತಾರೆ. ಆದೇ ರೀತಿಯಲ್ಲಿ ನಮ್ಮ ಬೆಂಗಳೂರಿನಲ್ಲೂ ಒಂದೊಂದು ಸ್ಟೇಷನ್‌ಗೆ ವ್ಯವಸ್ಥೆ ಮಾಡಿದ್ದಾರೆ ಬಹಳ ಸೌಕರ್ಯವಾಗುತ್ತದೆಂದು ಹೇಳುತ್ತೇನೆ

ಇನ್ನು, ಪ್ರತಿಯೊಂದು ಸ್ಟೇಷನ್‌ನಲ್ಲೂ ಒಂದೊಂದು ಪೀಸ್ ಕಮಿಟಿಯನ್ನು ಮಾಡಬೇಕೆಂದು ಹೇಳಿ ಮಾಡಿದ್ದಾರೆ, ಅದೇ ರೀತಿಯಾಗಿ ಅಶೋಕ ನಗರದ ಪೋಲೀಸ್ ಸ್ಟೇಷನನಲ್ಲಿ ಒಂದು ಪೀಸ್ ಕಮಿಟಿಯನ್ನು ಮಾಡಿದರು ಆದರೆ ಬೇರೆ ಕಡೆ ಎಲ್ಲೂ ಕೂಡ ಈ ರೀತಿ ಯಾದ ಕಮಿಟಿಗಳನ್ನು ಮಾಡಲಿಲ್ಲ. ಈ ಪೀಸ್ ಕಮಿಟಿಗಳನ್ನು ಮಾಡುವುದರಿಂದ ಆಯಾಯಾ ಡಿವಿಜನ್‌ಗಳಲ್ಲಿ ಏನೇನು ನಡೆಯುತ್ತಿದೆ ಎಂಬುದರ ಬಗ್ಗೆ ತಿಂಗಳಿಗೆ ಒಂದು ಸಾರಿ ಮೀಟಿಂಗ್ ಕರೆದು ಅವರವರ ಸಲಹೆಗಳನ್ನು ಕೇಳಲು ಅನುಕೂಲವಾಗುತ್ತದೆ. ಇದರಿಂದ ಜನರಿಗೆ ಏನು ತೊಂದರೆಯಾಗುತ್ತಿದೆ, ಏನು ಅನುಕೂಲತೆ ಗಳನ್ನು ಕಲ್ಪಿಸಿಕೊಡಬಹುದು ಎಂಬುದರ ಬಗ್ಗೆ ಸಹಾಯಕವಾಗುತ್ತಿದೆ.

ಇನ್ನು, ರೈತರ ವಿಷಯದ ಬಗ್ಗೆ ಎಲ್ಲ ಮಾನ್ಯ ಸ್ನೇಹಿತರು ಮಾತನಾಡಿದರು. ಆದರೆ ನಾನು ರೊಟ್ಟಿ ಅಂಗಡಿಯ ವಿಷಯದ ಬಗ್ಗೆ ಒಂದೆರಡು ವಿಚಾರಗಳನ್ನು ಹೇಳಬಯಸುತ್ತೇನೆ, ಮಾನ್ಯ ಮುಖ್ಯಮಂತ್ರಿಯವರಿಗೆ ಬಜೆಟ್ ವೇಳೆಯಲ್ಲಿ ಒಂದು ಸಲಹೆಯನ್ನು ಕೊಟ್ಟಿದ್ದೇನೆ ಸ್ವಾಮಿ ಸ್ಟೇಟ್ ಬ್ಯಾಂಕ್‌ನವರು ೫೦ ಸಾವಿರ ರೂಪಾಯಿಗಳ ಟರ್ನ್‌ಓವರ್ ಆದರೂ ಕೂಡ ಮಂತ್ರಿ ಸ್ಟೇಟ್‌ಮೆಂಟ್ ಕೊಡಬೇಕೆಂದು ಕೇಳುತ್ತಾರೆ. ೫೦ ಸಾವಿರ ಸಾಲವನ್ನು ತೆಗೆದುಕೊಂಡಿದ್ದರೆ ಸೇಲ್ಸ್ ಟ್ಯಾಕ್ಸ್ ಕಟ್ಟುವುದಕ್ಕೆ ಅವಕಾಶವಿರಲಿಲ್ಲವೆಂದು ಇದ್ದರೂ ಕೂಡ ಬಹಳ ತೊಂದರೆಯನ್ನು ಕೊಡುತ್ತಿದ್ದಾರೆ. ಈ ಸಮಯದಲ್ಲಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ ಸ್ವಾಮಿ ೫ ವರ್ಷಗಳ ಹಿಂದೆ ಏನು ಬ್ರೆಡ್‌ನ್ನು ೫೦-೬೦ ಪೈಸೆಗೆ ಮಾರುತ್ತಿದ್ದರು ಈಗ ಅದೇ ಬ್ರೆಡ್‌ಗೆ ಎರಡು ರೂಪಾಯಿ ಮಾಡಿರ ತಕ್ಕಂಥದ್ದು ಇರುತ್ತದೆ. ಆದ್ದರಿಂದ ದಯವಿಟ್ಟು ಎರಡು ಪರ್ಸೆಂಟ್ ಸೇಲ್ಸ್ ಟ್ಯಾಕ್ಸ್ ಏನು ಹಾಕಿರುತ್ತೀರಿ ಅದನ್ನು ದಯವಿಟ್ಟು ತೆಗೆಯಬೇಕೆಂದು ಕೇಳಿಕೊಳ್ಳುತ್ತೇನೆ. ಇವೊತ್ತು ಸಣ್ಣಸಣ್ಣ ಬೇಕರಿಗಳೆಲ್ಲಾ ನಿಂತುಹೋಗಿವೆ. ದೊಡ್ಡದೊಡ್ಡ ಬೇಕರಿಗಳು ಮಾತ್ರ ನಡೆಯುತ್ತಿವೆ. ಇದರಿಂದ ಬಡವರು ಉಪಯೋಗಿಸುವಂತಹ ಬ್ರೆಡ್‌ನ ಬೆಲೆ ಜಾಸ್ತಿಯಾಗಿಬಿಟ್ಟಿದೆ ಸರ್ಕಾರದವರು ಇದರ ಮೇಲೆ ಹಾಕುತ್ತಿರುವಂತಹ ಸೇಲ್ಸ್ ಟ್ಯಾಕ್ಸ್‌ನ್ನು ತೆಗೆದುಹಾಕಿದರೆ ಬ್ರೆಡ್‌ನ ಬೆಲೆ ಕಡಿಮೆಯಾಗುತ್ತದೆಂದು ಹೇಳುತ್ತೇನೆ. ರ್ಯಾಪರ್ ಮಾಡಿರುವಂತಹ ಬಿಸ್ಕತ್ ಮೇಲೆ ತಾವು ತೆರಿಗೆ ಹಾಕಿ. ಏಕೆಂದರೆ ಇದು ಬಹಳ ದಿವಸಗಳ ಕಾಲ ಇರುತ್ತದೆ. ಆದರೆ ಲೂಸ್-ಬಿಸ್ಕತ್‌ಗಳು ಒಂದೆರಡು ದಿವಸಗಳೂ ಸಹ ಇರು ವುದಿಲ್ಲ. ಆದ್ದರಿಂದ ಈ ಬಿಸ್ಕತ್ ಮೇಲೆ ಹಾಕಿರುವಂತಹ ತೆರಿಗೆಯನ್ನು ತೆಗೆದುಹಾಕಬೇಕೆಂದು ಕೇಳಿ ಕೊಳ್ಳುತ್ತೇನೆ.

ಇನ್ನು ಸ್ಕೂಲ್ ಸ್ಟೂಡೆಂಟ್ಸ್‌ಗಳಿಗೆ ಕೊಡುತ್ತಿದ್ದ ಸ್ಕಾಲರ್‌ಷಿಪ್‌ನ್ನು ೫೦ ರಿಂದ ೭೫ ರೂಪಾಯಿ ಗಳಿಗೆ ಮತ್ತು ೭೫ ರಿಂದ ನೂರು ರೂಪಾಯಿಗಳಿಗೆ ಹೆಚ್ಚು ಮಾಡಿದ್ದಾರೆ. ಇದಕ್ಕೆ ಬದಲು ೫೦ ರೂಪಾಯಿಗಳನ್ನು ನೂರು ರೂಪಾಯಿಗಳಿಗೆ ಮತ್ತು ೭೫ ರೂಪಾಯಿಗಳಿರುವುದನ್ನು ೧೫೦ ರೂಪಾಯಿ ಗಳಿಗೆ ಹೆಚ್ಚು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇದರ ಜೊತೆಗೆ ಈಗಿರುವಂತಹ ಮಿಡ್ಡಿ ಮೀಲ್ಸ್‌ನ್ನು ಮುಂದುವರೆಸಬೇಕೆಂದು ಹೇಳುತ್ತೇನೆ.

ಇನ್ನು ನಾನು ದೆಹಲಿಗೆ ಹೋಗಿ ನೋಡಿದ್ದೇನೆ. ಅಲ್ಲಿನ ಹಾಲಿನ ಡೈರಿಯವರು ಹಾಲನ್ನು ಲೀಟರ್‌ಗೆ ೧-೮೦ ಪೈಸೆಗೆ ಮಾರಾಟ ಮಾಡುತ್ತಿದ್ದಾರೆ. ಆದ್ದರಿಂದ ಮುಖ್ಯಮಂತ್ರಿಗಳು ಕೇಂದ್ರದಿಂದ ಸಹಾಯ ಪಡೆದುಕೊಂಡು ನಮ್ಮ ಕರ್ನಾಟಕದ ಕನ್ನಡಿಗರಿಗೂ ಸಹ ಲೀಟರ್‌ಗೆ ಎರಡೂ ರೂಪಾಯಿಗಳ ಪ್ರಕಾರ ಮಾರಾಟ ಮಾಡಬೇಕೆಂದು ಮತ್ತು ಇದನ್ನು ಬರುವ ರಾಜ್ಯೋತ್ಸವದ ದಿನದಿಂದಲೆ, ಪ್ರಾರಂಭ ಮಾಡಬೇಕೆಂದು ಕೇಳಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಆನಂದರಾವ್ (ಶಿವಮೊಗ್ಗ).— ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಯವರ ಬೇಡಿಕೆಗಳನ್ನು ನಾವು ಒಪ್ಪಲೇಬೇಕು, ನಾವು ಒಪ್ಪಲಿಲ್ಲವೆಂದರೆ, ಅವರು ಕೆಲಸ ಮಾಡಲು ತೊಂದರೆ ಕೊಟ್ಟಂತೆ ಆಗುತ್ತದೆ, ಈ ಸಮಯದಲ್ಲಿ ನಾನು ಕೆಲವು ವಿಷಯಗಳನ್ನು ಅವರ ಗಮನಕ್ಕೆ ತರುವುದು ಕ್ಷಿಪ್ತಪಡುತ್ತೇನೆ. ಮೊದಲನೆಯದಾಗಿ ವಾಣಿಜ್ಯ ತೆರಿಗೆ ಬಗ್ಗೆ ಸರ್ಕಾರದ ಧೋರಣೆ ನನಗೆ ಅರ್ಥವಾಗುತ್ತಿಲ್ಲ. ಈ ಹಿಂದಿನ ಸರ್ಕಾರದಲ್ಲಿ ಅರ್ಥ ಮಂತ್ರಿಗಳಾಗಿದ್ದ ಶ್ರೀ ವೀರಪ್ಪ ಮೊಯ್ಲಿ ಅವರು ಈ ಟ್ಯಾಕ್ಸ್ ಲಿಮಿಟ್ ೨೫ ಸಾವಿರ ಇದ್ದದ್ದನ್ನು ೩೫ ಸಾವಿರಕ್ಕೆ ಹೆಚ್ಚು ಮಾಡಿದರು. ನಂತರ ಅದರ ಮುಂದಿನ ವರ್ಷ ಇದನ್ನು ಮತ್ತೆ ೨೫ ಸಾವಿರ ಎಂದು ಮಾಡಿದರು. ಇದಕ್ಕೇನು ಕಾರಣ ಎಂಬುದು ನನಗೆ ತಿಳಿಯದು ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಇದನ್ನು ೪೦ ಸಾವಿರ ಎಂದು ಮಾಡಿದೆ. ಭೂತಲಿಂಗಂ ಕಮಿಟಿಯವರು ತಮ್ಮ ವರದಿಯಲ್ಲಿ ಕೊಟ್ಟಿರುವ ಹಾಗೆ ಒಂದು ಲಕ್ಷಕ್ಕೂ ಕಡಿಮೆ ವ್ಯವಹಾರವಿದ್ದರೆ ಶೇಕಡಾ ೪ರಷ್ಟು ವರಮಾನವಿರುತ್ತದೆ, ಇಂತಹವರಿಂದ ಟ್ಯಾಕ್ಸ್ ವಸೂಲಿಯಾಗುವುದು ಕಡಿಮೆ ಎಂತ್ತು ವಸೂಲಿ ಮಾಡುವುದಕ್ಕೆ ಆಗತಕ್ಕಂಥ ಖರ್ಚು ಜಾಸ್ತಿ ಎಂದು ಹೇಳಿರುವುದರಿಂದ ಒಂದು ಲಕ್ಷಕ್ಕೆ ಇದನ್ನು ಹೆಚ್ಚು ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ.

ಇನ್ನು ಆಹಾರ ಧಾನ್ಯಗಳ ಮೇಲೆ ನಮ್ಮ ಸರ್ಕಾರ ತೆರಿಗೆ ಹಾಕುತ್ತಿದೆ. ಇದರಿಂದ ಬೆಲೆಗಳ ಏರಿಕೆಗೆ ಅವಕಾಶವಾಗಿದೆ. ಆದ್ದರಿಂದ ಇದನ್ನು ರದ್ದು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ಶಿವಮೊಗ್ಗ ಜಿಲ್ಲೆ ಕರ್ನಾಟಕ ರಾಜ್ಯದ ಭತ್ತದ ಕಣಜ ಎಂದು ಪ್ರಸಿದ್ಧಿಯಾಗಿದೆ. ಇಲ್ಲಿ ಸುಮಾರು ೨೫೦ ಮಿಲ್‌ಗಳಿವೆ. ಆದ್ದರಿಂದ ಇಲ್ಲಿ ಅಕ್ಕಿ ಮತ್ತು ಭತ್ತದ ವ್ಯವಹಾರ ಸಾಕಷ್ಟು ನಡೆಯುತ್ತದೆ. ಕಳೆದ ಡಿಸೆಂಬರ್ ತಿಂಗಳಲ್ಲಿ ಶಿವಮೊಗ್ಗ ಜಿಲ್ಲೆಯಿಂದ ಸುಮಾರು ೫ ಲಕ್ಷ ಕ್ವಿಂಟಾಲ್‌ಗಳಷ್ಟು ಅಕ್ಕಿ ಕೇರಳಾ ರಾಜ್ಯಕ್ಕೆ ಸಾಗಾಣಿಕೆಯಾಗಿದೆ. ಆದರೆ ಆಗಿನ ಸರ್ಕಾರ ಅಲ್ಲಿದ್ದ ಕಮರ್ಷಿಯಲ್ ಇಂಟಲಿಜೆನ್ಸ್ ವಿಭಾಗವನ್ನು ಮುಚ್ಚಿ ದಾವಣಗೆರೆಯಲ್ಲಿ ಪ್ರಾರಂಭ ಮಾಡಿತು. ನೆನ್ನೆ ದಿನ ನಾನು ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಜೊತೆಯಲ್ಲಿ ಮಾತನಾಡಿದಾಗ ೬ ತಿಂಗಳ ಮಟ್ಟಿಗೆ ಎಕ್ಸ್‌ಪರಿಮೆಂಟ್ ಮಾಡಿ ಪುನಃ ಶಿವಮೊಗ್ಗದಲ್ಲಿ ಇದರ ಆವಶ್ಯಕತೆ ಇದ್ದರೆ ತೆರೆಯುತ್ತೇವೆ. ಇಲ್ಲದಿದ್ದರೆ ಒಂದು ಫ್ಲೈಸ್ಕ್ವಾಡ್–ಆಫೀಸ್ ಆದರೂ ತೆರೆಯುತ್ತೇವೆಂದು ಹೇಳಿದರು. ಶಿವಮೊಗ್ಗದಲ್ಲಿರುವ ಎಂಟ್ರಿ ಟ್ಯಾಕ್ಸ್, ಕಛೇರಿಗೆ ಈಗ ಕೆಲಸವೇ ಇಲ್ಲ. ಅಲ್ಲಿರುವ ಉನ್ನತ ಅಧಿಕಾರಿಗಳು ಇದರಿಂದ ಐಡಲ್ ಆಗಿದ್ದಾರೆ. ಆದ್ದರಿಂದ ಕಮರ್ಷಿಯಲ್ ಟ್ಯಾಕ್ಸ್ ಆಫೀಸರ್ ಅವರೇ ಈ ಕೆಲಸವನ್ನು ಮಾಡಬಹುದಾಗಿದೆ. ಆದ್ದರಿಂದ ಸರ್ಕಾರ ಈ ಬಗ್ಗೆ ಯೋಚನೆ ಮಾಡಬೇಕೆಂದು ಹೇಳುತ್ತೇನೆ. ಈ ರೀತಿ ಮಾಡುವುದರಿಂದ ವ್ಯಾಪಾರಸ್ಥರು ಎರಡು ಕಛೇರಿಗಳಿಗೆ ಹೋಗಿ ಬರುವುದು ತಪ್ಪುತ್ತದೆ.

ಇನ್ನು ಟ್ರಾಫಿಕ್ ರೂಲ್ಸ್ ಬಗ್ಗೆ ಒಂದು ವಿಷಯ ಹೇಳುತ್ತೇನೆ. ಈಗಿನ ನಿಯಮದಂತೆ ಟಿ.ವಿ.ಎಸ್. ಮತ್ತು ಇತರ ದ್ವಿಚಕ್ರ ವಾಹನಗಳಲ್ಲಿ ಒಬ್ಬರು ಹೋದರೆ ತಲೆಗೆ ಹೆಲ್ಮೆಟ್ ಹಾಕಬೇಕಾಗಿಲ್ಲ ಆದರೆ ಇಬ್ಬರು ಹೋದರೆ ಹೆಲ್ಮೆಟ್ ಹಾಕಬೇಕಾಗುತ್ತದೆ. ನನ್ನ ಮಗ ಒಂದು ಸಲ ಇಂತಹ ಗಾಡಿಯಲ್ಲಿ ಹೋಗುವಾಗ ಮಾರ್ಗಮಧ್ಯೆ ಸಿಕ್ಕಿದ ತನ್ನ ಸ್ನೇಹಿತನನ್ನು ಅದೇ ಗಾಡಿಯಲ್ಲಿ ಕೂರಿಸಿಕೊಂಡು ಹೋಗುವಾಗ ಹೆಲ್ಮೆಟ್ ಧರಿಸಿಲ್ಲವೆಂಬ ಕಾರಣ ಕೊಟ್ಟು ಪೋಲೀಸ್ ಅಧಿಕಾರಿಗಳು ಕೇಸ್ ಹಾಕಿದ್ದರಿಂದ ನನ್ನ ಮಗ ೪೦ ರೂಪಾಯಿಗಳ ದಂಡವನ್ನು ತೆರುವಂತಹ ಪರಿಸ್ಥಿತಿ ಬಂತು. ಈ ಟಿ.ವಿ.ಎಸ್, ಮುಂತಾದ ದ್ವಿಚಕ್ರ ವಾಹನಗಳಲ್ಲಿ ಒಬ್ಬರು ಹೋದರೆ ಹೆಲ್ಮೆಟ್ ಬೇಡ, ಇಬ್ಬರು ಹೋದರೆ ಬೇಕು ಎಂದು ಹೇಳುವುದು ವಿಪರ್ಯಾಸದಿಂದ ಕೂಡಿದೆ ಇಂತಹ ಕಾನೂನನ್ನು ಮೊದಲು ತೆಗೆದುಹಾಕಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಪೋಲೀಸ್ ಸಿಬ್ಬಂದಿಯ ಬಗ್ಗೆ ಒಂದೆರಡು ವಿಷಯಗಳನ್ನು ಹೇಳುತ್ತೇನೆ. ಇವರ ಬಗ್ಗೆ ಟೀಕೆಗಳೇ ಜಾಸ್ತಿ ಬಂದಿವೆ. ಆದರೆ ನಾನು ಇವರ ಬಗ್ಗೆ ಸಹಾನುಭೂತಿ ಪರವಾಗಿ ಎರಡು ವಿಷಯ

ಗಳನ್ನು ಹೇಳುತ್ತೇನೆ, ಮುಖ್ಯವಾಗಿ ಇವರಿಗೆ ಸರಿಯಾದ ವಾಸಸ್ಥಳ ಇರುವುದಿಲ್ಲ. ಶಿವಮೊಗ್ಗದಲ್ಲಿರುವ ಪೋಲೀಸ್ ಕಾಲೋನಿಯಲ್ಲಿ ಕಳೆದ ೩೫ ವರ್ಷಗಳಿಂದ ಎಲೆಕ್ಟ್ರಿಕ್ ದೀಪದ ವ್ಯವಸ್ಥೆ ಇಲ್ಲದ ಕಾರಣದಿಂದ ಅಲ್ಲಿ ವಾಸ ಮಾಡುತ್ತಿದ್ದವರು ಸೀಮೆಣ್ಣೆ ದೀಪಗಳನ್ನು ಉಪಯೋಗಿಸುತ್ತಿದ್ದರು. ಇತ್ತೀಚೆಗೆ ಅಲ್ಲಿ ವಿದ್ಯುತ್‌ನ ಒಂದು ಸೌಲಭ್ಯವನ್ನು ಕಲ್ಪಿಸಿಕೊಟ್ಟರು, ಆದರ ಒಂದು ಉದ್ಘಾಟನೆಗೆ ನನ್ನನ್ನು ಕರೆದಿದ್ದರು. ಇಲ್ಲಯವರೆಗೆ ಈ ಹಿಂದಿನ ಸರ್ಕಾರಗಳು ಏತಕ್ಕೆ ಇದರ ಕಡೆ ಗಮನಕೊಟ್ಟಿರಲಿಲ್ಲವೋ ನನಗೆ ಗೊತ್ತಿಲ್ಲ. ೧೯೭೦ರಲ್ಲಿ ಹತ್ತು ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ, ಅದು ಇನ್ನೂ ಜಾರಿಯಲ್ಲಿ ಬರಲಿಲ್ಲ ಎಂದು ನನಗೆ ಉನ್ನತ ಪೋಲೀಸ್ ಅಧಿಕಾರಿಗಳು ತಿಳಿಸಿದರು. ಈಗಿನ ಸರ್ಕಾರವಾದರೂ ಈ ಯೋಜನೆ ಏನಿದೆ ಎಂಬುದನ್ನು ನೋಡಿ, ಕಾರ್ಯಗತ ಮಾಡಬೇಕು. ಇದರಿಂದ ಇವರಿಗೆ ಸಾಕಷ್ಟು ಅನುಕೂಲಗಳನ್ನು ಒದಗಿಸಿಕೊಡಬಹುದಾಗಿದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ರೈಲ್ವೇನವರಿಗೆ ಸಹಾಯ ಮಾಡಲು ಈಗ ನಮ್ಮ ಸರ್ಕಾರದವರು ಕೆಲವು ಪೋಲೀಸ್ ಅಧಿಕಾರಿಗಳನ್ನು ಕಳುಹಿಸಿಕೊಡುತ್ತಾರೆ. ಆದರೆ ಇವರಿಗೆ ರೈಲ್ವೇ ಅಧಿಕಾರಿಗಳಿಗೆ ಸಿಗುವಂತಹ ಪಾಸ್‌ನ ಅನುಕೂಲವಾಗಲೀ, ವಾಸಸ್ಥಳದ ಅನುಕೂಲವಾಗಲೀ ಹಾಗೂ ಇನ್ನಿತರ ಸೌಲಭ್ಯಗಳಾಗಲೀ ಸಿಗುತ್ತಿಲ್ಲ. ರೈಲ್ವೇ ನೌಕರರಿಗೆ ಸಿಗುವಂತಹ ಎಲ್ಲ ಸೌಲಭ್ಯಗಳನ್ನು ಇವರಿಗೂ ಸಹ ಅನ್ವಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

೭.೦೦ ಪಿ.ಎಂ.

ಇನ್ನೊಂದು ವಿಷಯದ ಬಗ್ಗೆ ನನಗೆ ಒಬ್ಬ ರಿಟೈರ್ಡ್ ಜಡ್ಜ್ ಕಾಗದ ಬರೆದಿದ್ದಾರೆ. ಅದು ಮಾನವೀಯತೆಯ ವಿಷಯ ಅದನ್ನು ಸರ್ಕಾರ ಗಮನಿಸಬೇಕು. ಅದು ಏನೆಂದರೆ ದ್ವಿಚಕ್ರವಾಹನಗಳಲ್ಲಿ ಬಹಳಷ್ಟು ಜನ ಯುವಕರು ಪ್ರಯಾಣ ಮಾಡುತ್ತಾರೆ. ಯುವಕರು ಹೆಚ್ಚಾಗಿ ದ್ವಿಚಕ್ರ ವಾಹನಗಳಲ್ಲಿ ಓಡಾಡುವುದರಿಂದ ಬಹಳ ಅಪಘಾತಗಳು ಆಗುತ್ತವೆ. ಚಿಕ್ಕ ವಯಸ್ಸಿನವರೇ ಹೆಚ್ಚಾಗಿ ಅಪಘಾತಗಳಲ್ಲಿ ಮರಣ ಹೊಂದುತ್ತಾರೆ. ಚಿಕ್ಕ ವಯಸ್ಸಿನವರು ಮರಣ ಹೊಂದುವುದರಿಂದ ಅವರ, ಹೆಂಡತಿಯರು ಚಿಕ್ಕ ವಯಸ್ಸಿನವರು ವಿಧವೆಯರಾಗುವುದರಿಂದ ಅವರ ಮುಂದಿನ ಭವಿಷ್ಯ ಕತ್ತಲಾಗುವುದರಿಂದ ಸರ್ಕಾರ ಇದಕ್ಕೆ ಒಂದು ವ್ಯವಸ್ಥೆ ಮಾಡಬೇಕು. ಯಾರು ಆ ರೀತಿ ಅಪಘಾತದಲ್ಲಿ ತೀರಿಹೋಗುತ್ತಾರೆ ಅವರ ಹೆಂಡತಿ ಮಕ್ಕಳಿಗೆ ಕಂಪಾಸಿನೇಟ್ ಆಗಿ ಜಾಬ್ ಕೊಡತಕ್ಕ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕೆಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಫೈರ್‌ಸ್ಟೇಷನ್ ಬಗ್ಗೆ ಹೇಳಿದ್ದಾರೆ, ಆ ಪ್ರಕಾರ ಬೆಂಗಳೂರು ನಗರದಲ್ಲಿ ಎರಡು ಫೈರ್‌ಸ್ಟೇಷನ್‌ಗಳಿವೆ, ಮೈಸೂರಿನಲ್ಲಿ ಎರಡು ಉಳಿದಂತೆ ಎಲ್ಲಾ ಜಿಲ್ಲೆಗಳಲ್ಲಿ ಕೇವಲ ಒಂದೊಂದು ಫೈರ್‌ಸ್ಟೇಷನ್‌ಗಳಿವೆ ಹರಿಹರದಿಂದ ಶಿವಮೊಗ್ಗಕ್ಕೆ ಬರಬೇಕಾದರೆ ಹೊನ್ನಾಳಿಯ ಹತ್ತಿರ ಒಂದು ಹಳ್ಳಿಯಲ್ಲಿ ಬೆಂಕಿ ಬಿದ್ದಿತ್ತು ಹೊನ್ನಾಳಿಯಿಂದ ಶಿವಮೊಗ್ಗಕ್ಕೆ ವರದಿಯನ್ನು ಕೊಟ್ಟು ಶಿವಮೊಗ್ಗದಿಂದ ಬೆಂಕೆಯನ್ನು ಆರಿಸತಕ್ಕ ವಾಹನ ಹೊನ್ನಾಳಿಯ ಹತ್ತಿರ ಹಳ್ಳಿಗೆ ಬಂದು ಬೆಂಕಿಯನ್ನು ಆರಿಸಬೇಕಾದರೆ ಕನಿಷ್ಟ ಮೂರು ಗಂಟೆಗಳ ಕಾಲ ಹಿಡಿಯಿತು. ಬೆಂಕಿಯನ್ನು ಆರಿಸುವಷ್ಟರಲ್ಲಿ ಹೊತ್ತಿಗೆ ಸಂಪೂರ್ಣವಾಗಿ ಬಣವೆಗಳು ಭಸ್ಮವಾಗಿದ್ದವು. ಸರ್ಕಾರ ಇದರ ಬಗ್ಗೆ ಒಂದು ವ್ಯವಸ್ಥೆ ಮಾಡಬೇಕು. ಕನಿಷ್ಟ ೨೫ ಕಿಲೋಮೀಟರ್‌ಗೆ ಒಂದು ಫೈರ್ ಸ್ಟೇಶನ್ ಮಾಡಿದರೆ ಬೆಂಕಿ ಅಪಘಾತಗಳನ್ನು ತಡೆಯಲಿಕ್ಕೆ ಅನುಕೂಲವಾಗುತ್ತದೆ. ಆ ಒಂದು ವ್ಯವಸ್ಥೆಯನ್ನು ಎಲ್ಲಾ ಜಿಲ್ಲೆಗಳಲ್ಲೂ ಮಾಡಬೇಕೆಂದು ಈ ಸಂದರ್ಭದಲ್ಲಿ ಸರ್ಕಾರವನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಪೋಲೀಸ್‌ನವರಿಗೆ ತರಬೇತಿ ಕೊಡುವ ಬಗ್ಗೆ ಹೇಳುವುದಾದರೆ, ಲಂಡನ್‌ನಲ್ಲಿ ಪೋಲೀಸರ ಬಗ್ಗೆ ಜನಸಾಮಾನ್ಯರಿಗೆ ಬಹಳಷ್ಟು ಗೌರವವಿದೆ. ಪೋಲೀಸ್‌ನವರು ಎಲ್ಲರ ರಕ್ಷಕರು ಎನ್ನುವ ಭಾವನೆಯಿದೆ. ಆದರೆ ದುರಾದೃಷ್ಟವಶಾತ್ ಅಂತಹ ಒಂದು ತರಬೇತಿ ನಮ್ಮ ದೇಶದಲ್ಲಿ ಇಲ್ಲ. ಮಾನವೀಯತೆಯಿಂದ ಜನಗಳನ್ನು ಯಾವರೀತಿ ನೋಡಿಕೊಳ್ಳಬೇಕು, ಅವರ ರಕ್ಷಕರಾಗಿ ಜನಸಾಮಾನ್ಯರ ಜೊತೆ ಯಾವರೀತಿ ವರ್ತಿಸಬೇಕು ಎನ್ನುವುದರ ಬಗ್ಗೆ ತರಬೇತಿ ಕೊಡುವ ವ್ಯವಸ್ಥೆ ಮಾಡಬೇಕೆಂದೂ ಅಂತಹ ಒಂದು ನಿರ್ದೇಶನವನ್ನು ಪೋಲೀಸ್ ಇಲಾಖೆಗೆ ಕೊಡಬೇಕೆಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ನನ್ನ ಮುಖಾಂತರ ಒಂದು ವಿಷಯವನ್ನು ಹೇಳಬೇಕೆಂದು ಹೇಳಿದ್ದಾರೆ. ಶಿಕಾರಿಪುರದ ಹಾಟಿಕಲ್ ಹೋಬಳಿಯ ಜುರ ಹಳ್ಳಿಯ ಎರಡಾ ಸಾವಿರ ಜನ

ಗಳಿಗೆ ಜಮೀನಿನ ಪರಿಹಾರ ಹಣವನ್ನು ಸರ್ಕಾರ ಕೊಡುವುದಕ್ಕೆ ಇನ್ನು ಕೇಂದ್ರ ಸರ್ಕಾರದಿಂದ ಬಂದಿಲ್ಲ ವೆಂದು ಹೇಳುತ್ತಿದ್ದಾರೆ. ಕೇಂದ್ರ ಸರ್ಕಾರದಿಂದ ಬರುವವರೆಗೆ ಬಡ ರೈತರ ಸ್ಥಿತಿಯೇನು ?

ಉಪಾಧ್ಯಕ್ಷರು.— ಮಾನ್ಯ ಕಂದಾಯ ಸಚಿವರು ಈಗಾಗಲೇ ಸದನದಲ್ಲಿ ಉತ್ತರ ಹೇಳಿದ್ದಾರೆ.

ಶ್ರೀ ಎಂ. ಆನಂದರಾವ್.— ಮಾನ್ಯ ಕಂದಾಯ ಸಚಿವರು ಪರಿಹಾರ ಕೊಡುತ್ತೇವೆಂದು ಹೇಳಿದ್ದರೆ ಒಳ್ಳೆಯದು. ನಾನು ಮಾತನಾಡಲಿಕ್ಕೆ ಕೊನೆಯಲ್ಲಿ ಅವಕಾಶ ಮಾಡಿಕೊಟ್ಟಿದ್ದು ತಮ್ಮ ದಯ ಯೆಂದು ತಿಳಿದುಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು.—ನಮ್ಮ ದಯೆ ಅಲ್ಲ, ಮಾತನಾಡುವುದು ನಿಮ್ಮ ಹಕ್ಕು.

† ಶ್ರೀ ಬಿ. ದೊಡ್ಡಬೋರೇಗೌಡ (ಮಂಡ್ಯ).—ಸನ್ಮಾನ್ಯ ಉಪಾಧ್ಯಕ್ಷರೆ, ನಾನು ಮಾತನಾಡಲಿಕ್ಕೆ ಅವಕಾಶ ಕೊಟ್ಟಿರುವುದು ಹೇಗಿದೆಯೆಂದರೆ ' ಊರೆಲ್ಲಾ ಲೂಟಿಯಾದ ಮೇಲೆ ಕೋಟಿ ಬಾಗಿಲು ಹಾಕಿದರು ಏನ್ನುವಹಾಗೆ ' ನಾನು ಮಾತನಾಡಲಿಕ್ಕೆ ಕಡೆಯಲ್ಲಿ ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕಾಗಿ ನನ್ನ ವಂದನೆಗಳು. ಇಲ್ಲಿ ವಾಣಿಜ್ಯ ಇಲಾಖೆಯ ಅಧಿನಿಯಮ ಆಯವ್ಯಯಪಟ್ಟಿಯ ಮುಖಪುಟದಲ್ಲಿದೆ. ಪುಸಕ್ತಸಾಲಿನಲ್ಲಿ ನಮ್ಮ ಆದಾಯ ೪೦೪ ಕೋಟಿ ರೂಪಾಯಿ ೫೨ ಲಕ್ಷದ ಚಿಲ್ಲರೆಯೆಂದು ಇಲ್ಲಿ ಇದೆ. ಆದರಲ್ಲಿ ವಸೂಲಿಯಾಗಿರತ್ಕದ್ದು ೨೮೮ ಕೋಟಿ ರೂಪಾಯಿ ೯೬ ಲಕ್ಷವೆಂದು ಇಲ್ಲಿದೆ. ಈ ಬಗ್ಗೆ ನಾನು ಮಂಡ್ಯಜಿಲ್ಲೆಯ ಶಾಸಕನಾಗಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ನಮ್ಮ ಮಾನ್ಯಮಿತ್ರರುಗಳು ಮಾತನಾಡುತ್ತಾ ನಮ್ಮ ರಾಜ್ಯದಲ್ಲಿ ಪ್ರಪಸ್ಥಿತವಾಗಿ ತೆರಿಗೆಗಳು ವಸೂಲಿಯಾಗಿಲ್ಲ, ಸಾಮಾನ್ಯ ಜನಗಳು ಕಂಗಾಲಾಗಿದ್ದಾರೆ, ಅಪರ ಅಭಿವೃದ್ಧಿಯಾಗಿಲ್ಲ, ಅವರಿಗೆ ನಿಮ್ಮ ಹೃದಯವನ್ನು ನೀಡಲ್ಲವೆಂದು ಎಲ್ಲಾ ಸದಸ್ಯರು ಹೇಳಿದ್ದಾರೆ. ಬಹುಕಾಲದಿಂದ ಚುನಾವಣೆಗಳನ್ನು ನಡೆಸದೆ ಮುಂದುವರಿಸಿಕೊಂಡು ಬಂದಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ದಿಟ್ಟತನದಿಂದ ಈ ರಾಜ್ಯದಲ್ಲಿ ಬಡತನದ ರೇಖೆಗಿಂತ ಯಾರು ಕೆಳಗಿದ್ದಾರೆ ಯಾರು ಮುಗ್ಧಜೀವಿಗಳಿದ್ದಾರೆ, ಅವರ ಕಲ್ಯಾಣಕ್ಕಾಗಿ ಮುಖ್ಯಮಂತ್ರಿಗಳು ದಿಟ್ಟನಿಲುವನ್ನು ತಾಳಿ, ತೆರಿಗೆ ಹಾವಳಿಯನ್ನು ನಿರ್ಮೂಲನ ಮಾಡಿದರೆ ಗ್ರಾಮಾಂತರ ಪ್ರದೇಶಗಳಲ್ಲಿ ಕೃಷಿ ಜೀವನ ಮಾಡತಕ್ಕ ಕೃಷಿಕರು ಯಾವುದೇ ತೆರಿಗೆಯನ್ನು ಸರ್ಕಾರಕ್ಕೆ ಕೊಡಬೇಕಾಗಿಲ್ಲ. ಅವರು ಮಾಡತಕ್ಕ ಉತ್ಪಾದನೆಯಿಂದ ಸರ್ಕಾರಕ್ಕೆ ತೆರಿಗೆ ರೂಪದಲ್ಲಿ ಬೇಕಾದಷ್ಟು ಹಣ ಬರುತ್ತಿದೆ. ಅದಕ್ಕೆ ಕೆಲವು ನಿದರ್ಶನಗಳನ್ನು ನಾನು ಒಂದೆರಡು ಮಾತುಗಳಲ್ಲಿ ಹೇಳುತ್ತೇನೆ. ರೆಗ್ಯುಲೇಟೆಡ್ ಮಾರ್ಕೆಟ್‌ಗಳು ರಾಜ್ಯಾದ್ಯಂತ ಎಲ್ಲಾ ಜಿಲ್ಲೆಗಳಲ್ಲೂ ಇವೆ. ಆದರೆ ಮಂಡ್ಯ ಜಿಲ್ಲೆಯಲ್ಲಿ ೪೦ ಲಕ್ಷಟನ್ ಕಬ್ಬನ್ನು ರೈತರು ಬೆಳೆಯುತ್ತಾರೆ. ಅಷ್ಟಿರತಕ್ಕ ಮೂರು ಸಕ್ಕರೆ ಕಾರ್ಖಾನೆಗಳು ೧೦ ಲಕ್ಷ ಟನ್ ಕಬ್ಬನ್ನು ಸಕ್ಕರೆಯನ್ನಾಗಿ ಉತ್ಪಾದನೆ ಮಾಡಲಾಗುತ್ತದೆ. ಖಂಡಸಾರಿ ಸಕ್ಕರೆ ಕಾರ್ಖಾನೆಗಳಲ್ಲಿ ಬೆಲ್ಲವನ್ನು ಸಕ್ಕರೆಯನ್ನಾಗಿ ಪರಿವರ್ತಿಸುತ್ತಾರೆ. ಖಂಡಸಾರಿ ಸಕ್ಕರೆ ಕಾರ್ಖಾನೆಯವರು ಮೂರು ಪುಸ್ತಕಗಳನ್ನು ಇಟ್ಟುಕೊಂಡಿದ್ದಾರೆ. ಕಬ್ಬು ಖರೀದಿ ಮಾಡುವುದಕ್ಕೆ ಮೂರು ಪುಸ್ತಕಗಳನ್ನು ಇಟ್ಟುಕೊಂಡಿರುತ್ತಾರೆ. ಒಂದು ವರ್ಷದಲ್ಲಿ ೭೫೦ ಟನ್ ಕಬ್ಬು ಕ್ರಷ್ ಮಾಡುತ್ತಾರೆ. ೧೦೦ ಟನ್ ಕಬ್ಬು ಕ್ರಷ್ ಮಾಡಿದರೆ ೧೬ ರೂಪಾಯಿ ಕೊಡಬೇಕಾಗುತ್ತದೆ. ಕೊಡಬೇಕಾದ ಟ್ಯಾಕ್ಸ್ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ಖಂಡಸಾರಿ ಫ್ಯಾಕ್ಟರಿಯವರು ಒಂದು ವ್ಯವಸ್ಥೆ ಮಾಡಿಕೊಂಡಿದ್ದಾರೆ ಅದೇನೆಂದರೆ ಮಂತ್ರಿಗಳ ಸಂಭಾವನೆಯೆಂದು ವಸೂಲಿ ಮಾಡುತ್ತಾರೆ ಆ ಭಾಗದಲ್ಲಿ ರಾಜಕಾರಣಿಗಳಿಗೆ ಕೊಟ್ಟಿದ್ದಾರೆ. ನಮ್ಮ ರಾಜ್ಯದಲ್ಲಿ ತೂಕ ಮತ್ತು ಅಳತೆ ಇಲಾಖೆಯೆಂದು ಒಂದು ಇಲಾಖೆಯಿಂದ, ಖಂಡಸಾರಿ ಕಾರ್ಖಾನೆಯವರು ಯಾವರೀತಿ ತೂಕಮಾಡುತ್ತಾರೆ ಆದರೆ, ಒಂದು ಲಾರಿಯಲ್ಲಿ ಕಬ್ಬು ೧೦ ಟನ್ ಇದ್ದರೆ ೯ ಟನ್ ಬರುವ ರೀತಿಯಲ್ಲಿ ತೂಕ ಮಾಡುತ್ತಾರೆ. ಒಂದು ಟನ್ ಕಬ್ಬು ಅವರ ಸ್ವಂತಕ್ಕೆ ಹೋಗುತ್ತದೆ. ಈ ಬಗ್ಗೆ ಅಧಿಕಾರಿಗಳಿಗೆ ಹೇಳಿದರೆ ತೂಕದ ವ್ಯವಸ್ಥೆಯ ಬಗ್ಗೆ ನೀವು ಏತಕ್ಕೆ ಘಾಬರಿಯಾಗುತ್ತೀರಿ ಎಂದು ನಯದ ಮಾತುಗಳನ್ನು ಹೇಳಿ ಜಾರಿಕೊಳ್ಳುವ ಪ್ರವೃತ್ತಿವುಳ್ಳವರಾಗಿದ್ದಾರೆ.

ಚೆಕ್‌ಪೋಸ್ಟ್‌ಗಳಲ್ಲಿ ನನಗೆ ಅಲ್ಲಿ ಒಂದು ವರ್ಷ ಕೆಲಸ ಮಾಡಲಿಕ್ಕೆ ಅವಕಾಶ ಕೊಟ್ಟರೆ ನಾನು ನನ್ನ ಶಾಸಕ ಸ್ಥಾನಕ್ಕೆ ರಾಜೀನಾಮೆಯನ್ನು ಕೊಡುತ್ತೇನೆ. ಒಂದು ಲಾರಿಯಲ್ಲಿ ಸಾಗಿಸುವ ಸಾಮಾನುಗಳ ಬಿಲ್‌ಗಳು ವ್ಯವಸ್ಥಿತವಾಗಿದ್ದರೂ ಕೂಡ ೨೫೦ ರೂಪಾಯಿಗಳನ್ನು ಕೊಡಬೇಕಂ. ಬಿಲ್‌ಗಳು

ಅರ್ಧಂಬರ್ಧ ಇದ್ದರೆ ೫೦೦ ರೂಪಾಯಿಗಳನ್ನು ಕೊಡಬೇಕು. ಯಾವುದೇ ಬಿಲ್‌ಗಳು ಇಲ್ಲದಿದ್ದರೆ ಒಂದು ಸಾವಿರ ರೂಪಾಯಿ ಕೊಟ್ಟರೆ ಚೆಕ್‌ಪೋಸ್ಟ್‌ಗಳಲ್ಲಿ ಸಾಮಾನುಗಳು ಹೋಗುತ್ತವೆ. ಇಂತಹ ಚೆಕ್‌ಪೋಸ್ಟ್‌ಗಳಿಂದ ರಾಜ್ಯದ ಬೊಕ್ಕಸಕ್ಕೆ ಬರತಕ್ಕ ಹಣವನ್ನು ವಿನಾಕಾರಣ ತಪ್ಪಿಸತಕ್ಕಂತಹ ಕಾಯಿದೆಗಳನ್ನು ಮಾಡಿಕೊಂಡಿದ್ದಾರೆ. ನಗರ ಪ್ರದೇಶಗಳಲ್ಲಿ ೧೧ ಪರ್ಸೆಂಟ್ ತೆರಿಗೆ ಇದೆ. ನನ್ನ ಜೊತೆಯಲ್ಲಿ ಅಧಿಕಾರಿಗಳು ಬಂದರೆ ತೋರಿಸಿಕೊಡುತ್ತೇನೆ, ವ್ಯಾಪಾರಿಗಳು ಯಾವರೀತಿ ಸರ್ಕಾರಕ್ಕೆ ಬರತಕ್ಕ ತೆರಿಗೆಯನ್ನು ತಪ್ಪಿಸುತ್ತಾರೆನ್ನುವುದನ್ನು ತೋರಿಸಿಕೊಡುತ್ತೇನೆ. ೧೦೦ ರೂಪಾಯಿಯೆಂದು ಹೇಳುವಂತಹ ಸಾಮಾನು ತೆಗೆದು ಕೊಂಡರೆ ೧೧ ರೂಪಾಯಿ ಟ್ಯಾಕ್ ಕೊಡಬೇಕು, ಬಿಲ್ ಬೇಡವೆಂದರೆ ೯೫ ರೂಪಾಯಿಗಳಿಗೆ ಅದೇ ಸಾಮಾನು ಕೊಡುತ್ತಾರೆ. ಸಾಮಾನು ಉತ್ಪಾದನೆಯಿಂದ ಹಿಡಿದು ಮಾರಾಟಕ್ಕೆ ಬರುವುದರೊಳಗೆ ಅನೇಕ ಹಂತಗಳಲ್ಲಿ ತೆರಿಗೆ ಇಲಾಖೆಯಿಂದ ರಾಜ್ಯದ ಬೊಕ್ಕಸಕ್ಕೆ ಕೋಟ್ಯಾಂತರ ರೂಪಾಯಿ ನಷ್ಟವಾಗುತ್ತಿದೆ. ಸಾಮಾನ್ಯ ಜನ ಇದರಿಂದ ದುಃಖದುಮ್ಮಾನ ಅನುಭವಿಸತಕ್ಕ ವ್ಯವಸ್ಥೆಯನ್ನು ಅಧಿಕಾರಿಗಳು ಆಳವಡಿಸಿಕೊಂಡಿದ್ದಾರೆ. ಇನ್ನು ಬಾಯ್ಲರ್ ಇಲಾಖೆಯ ಲೆಕ್ಕ ಪತ್ರಗಳ ಬಗ್ಗೆ ಹೇಳುವುದಾದರೆ, ನನ್ನ ಹತ್ತಿರ ಒಂದು ಬಾಯ್ಲರ್ ಇತ್ತು. ಹೊಡೆತ ತಡೆದು ಕೊಳ್ಳಲಾರದೆ ೨೦ ಲಕ್ಷ ರೂಪಾಯಿ ಬಾಯ್ಲರ್‌ನ್ನು ೧೧ ಲಕ್ಷ ರೂಪಾಯಿಗಳಿಗೆ ಮಾರಿದ್ದೇನೆ. ಪ್ರತಿವರ್ಷ ೫೦೦ ರೂಪಾಯಿ ಕೊಡಬೇಕು. ಆ ತರಹ ಕೊಡಬೇಕೆಂದು ಯಾವ ಬೈಲಾದಲ್ಲಿದೆ ?

ಮಾನ್ಯ ಮಂಖ್ಯಮಂತ್ರಿಗಳಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ ತಮ್ಮ ಇಲಾಖೆಯಲ್ಲಿ ಅಂದರೆ ಜನರಲ್ ಅಡ್ಮಿನಿಸ್ಟ್ರೇಷನ್‌ನಲ್ಲಿ ಕೆಲಸಕಾರ್ಯಗಳು ಬಹಳ ನಿಧಾನವಾಗಿ ನಡೆಯುತ್ತಿವೆ. ಮಾನ್ಯ ಮುಖ್ಯಮಂತ್ರಿಗಳು ಏಕೋ ಟ್ಯೂಬ್‌ಲೈಟ್‌ನಂತೆ ನಿಧಾನವಾಗಿ ಕೆಲಸಕಾರ್ಯಗಳನ್ನು ಮಾಡುತ್ತಿದ್ದಾರೇನೋ ಎನಗನ್ನಿಸುತ್ತದೆ. ಇನ್ನು ನಮ್ಮ ವಿರೋಧಪಕ್ಷದ ನಾಯಕರು ಮಾತನಾಡುವಾಗ ಹೇಳಿದರು ನಮ್ಮ ಕಾಲದಲ್ಲಿ ಭೂ ಸುಧಾರಣೆಯನ್ನು ನಾವು ಯಶಸ್ವಿಯಾಗಿ ಜಾರಿಗೆ ತಂದಿದ್ದೆವು. ಆದರೆ ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಭೂ ಸುಧಾರಣೆಯನ್ನು ಸಂಪೂರ್ಣವಾಗಿ ಕೈ ಬಿಟ್ಟಿದ್ದೀರಿ ಎಂದು. ಮತ್ತು ಈಗ ತಾವು ತಂದಿರತಕ್ಕಂಥ ಕಾನೂನಿನ ಪ್ರಕಾರ ಒಂದು ಎರಡು ಅಥವಾ ಮೂರು ಗುಂಟೆ ಜಮೀನು ಇದ್ದರು ಕೂಡ ಆ ಜಮೀನನ್ನು ಪಕ್ಕದ ರೈತನಿಗೆ ಕೊಡಬೇಕು ಬೇರೆಯವರಿಗೆ ಕೊಡಬಾರದು ಎಂದು ನಿಯಮವನ್ನು ಮಾಡಿದ್ದೀರಿ. ಸಾಮಾನ್ಯವಾಗಿ ಆ ಪಕ್ಕದ ರೈತನು ಈ ರೈತನ ಕಷ್ಟವನ್ನು ನೋಡಿಕೊಂಡು ಒಂದು ಗುಂಟೆ ಜಮೀನು ೧೦೦೦ ರೂಪಾಯಿಗಳ ಬೆಲೆ ಬಾಳಬಹುದಾಗಿದ್ದರೆ ಆ ಜಮೀನನ್ನು ಬರೀ ೫೦೦ ರೂಪಾಯಿಗಳಿಗೆ ಖರೀದಿ ಮಾಡುತ್ತೇನೆ. ಇದರಿಂದ ಮಾರಾಟ ಮಾಡುವಂಥ ರೈತನಿಗೆ ಯಾವ ಲಾಭ ಕೂಡ ಇಲ್ಲ. ಆದ್ದರಿಂದ ನಾನು ಹೇಳುವುದೇನೆಂದರೆ ಯಾವ ರೈತ ತನ್ನ ಜಮೀನನ್ನು ಮಾರಾಟ ಮಾಡಬೇಕಾದರೆ ಪಕ್ಕದ ಜಮೀನಿನ ರೈತನಿಗೆ ಕೊಡಬೇಕೆನ್ನುವ ನಿಯಮವನ್ನು ರದ್ದು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ನಾನು ಆಗ್ರೋ ಇಂಡಸ್ಟ್ರೀಸ್ ಬಗ್ಗೆ ಪ್ರಸ್ತಾಪ ಮಾಡುವುದಾದರೆ ಗಲ್ಲಿ ಸರಿಯಾದಂಥ ಇಂಜನಿಯರ್ಸ್ ಇಲ್ಲ. ಮತ್ತೆ ಆಲ್ಲಿ ರೈತರಿಗೆಂದು ಇಟ್ಟುಕೊಂಡಿರುವ ಬುಲ್ಡೋಜರ್‌ನ್ನು ನಾವು ಹೋಗಿ ಕೇಳಿದರೆ ಒಂದು ಗಂಟೆಗೆ ೧೫೦ ರೂಪಾಯಿಗಳು ಕೊಡಬೇಕು. ಮತ್ತೆ ೧೫೦ ರೂಪಾಯಿಗಳಲ್ಲಿ ೧೦೦ ರೂಪಾಯಿಗಳನ್ನು ಮುಂಗಡವಾಗಿ ಪಾವತಿ ಮಾಡಬೇಕಾಗುತ್ತದೆ, ಆದರೆ ಒಬ್ಬ ರೈತನಿಗೆ ಬುಲ್ಡೋಜರ್ ಬೇಕಾದರೆ ಆತ ಸುಮಾರು ೩ ವರ್ಷಗಳ ಮೊದಲೇ ರಿಜರ್ವ್ ಮಾಡಿಸಿರಬೇಕು. ಆ ೩ ವರ್ಷಗಳ ಸಂಪೂರ್ಣವಾಗಿ ಕಳೆದರೂ ಕೂಡ ಬಲ್ಡೋಜರ್ ಬರುವುದಿಲ್ಲ. ಸ್ವಾಮಿ ಈ ಬಗ್ಗೆ ನಾನೇ ನನ್ನ ಸ್ವಂತ ಅನುಭವದ ಪ್ರಕಾರ ಒಂದು ಮಾತನ್ನು ಹೇಳುವುದಾದರೆ ನಾನು ೧೯೮೧ನೇ ಇಸವಿಯಲ್ಲಿ ಬುಲ್ಡೋಜರ್‌ಬೇಕೆಂದು ರಿಜರ್ವ್ ಮಾಡಿಸಿದ್ದೆ ಆದರೆ ಇದುವರೆಗೂ ನನಗೆ ಬುಲ್ಡೋಜರ್ ಬರಲಿಲ್ಲ, ಈ ಬಗ್ಗೆ ಸರಿಯಾದ ಕ್ರಮ ತೆಗೆದುಕೊಳ್ಳಬೇಂದು ಸಂಬಂಧಪಟ್ಟ ಮಂತ್ರಿಗಳಿಗೂ ಕಾಗದ ಬರೆದಿದ್ದೇನೆ. ಮತ್ತು ಮುಖ್ಯ ಕಾರ್ಯದರ್ಶಿಯವರಿಗು ಕೂಡ ಪತ್ರವನ್ನು ಬರೆದಿದ್ದೇನೆ. ಆದರೆ ಯಾರೂ ಕೂಡ ಇದುವರೆಗೂ ಕ್ರಮ ತೆಗೆದುಕೊಂಡಿಲ್ಲ. ಈ ಆಗ್ರೋ ಇಂಡಸ್ಟ್ರೀಸ್‌ನಲ್ಲಿರತಕ್ಕಂಥ ಅಧಿಕಾರಿಗಳು ಈ ಸಂಸ್ಥೆಯನ್ನು ಸಾರ್ವಜನಿಕ ವ್ಯಾಪಾರ ಸಂಸ್ಥೆಯನ್ನಾಗಿ ಮಾಡಿಕೊಂಡಿದ್ದಾರೆ, ಮತ್ತು ಈ ಇಲಾಖೆಯವರು ಯಾವ ಶಾಸಕರಿಗೂ ಕೂಡ ಭಯ ಪಡುವುದಿಲ್ಲ, ಗ್ರಾಮಾಂತರ

ಪ್ರದೇಶದ ಜನರ ಮೇಲೆ ಅಭಿಮಾನವಿಲ್ಲ. ಗ್ರಾಮಾಂತರ ಪ್ರದೇಶದ ಜನರ ಮೇಲೆ ಯಾವುದೇ ರೀತಿಯ ಅಭಿಮಾನವಿಲ್ಲ. ಮತ್ತೆ ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಾದರೆ ಕಳೆದ ಫೆಬ್ರುವರಿ ಮತ್ತು ಮೇ ತಿಂಗಳಲ್ಲಿ ರಾಜ್ಯದ ಜನತೆಗೆ ಕುಡಿಯುವ ನೀರು ಇಲ್ಲದೆ ಬಹಳ ತೊಂದರೆ ಪಡುತ್ತಿದ್ದರು. ಆದರೆ ಜನತಾ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ರಾಜ್ಯದ ಎಲ್ಲಾ ಭಾಗಗಳಲ್ಲಿ ಕುಡಿಯುವ ನೀರನ್ನು ಒದಗಿಸಿಕೊಟ್ಟಿದ್ದಾರೆ, ಆ ಒಂದು ಪ್ರತಿಫಲಕ್ಕಾಗಿ ಈ ಸರ್ಕಾರಕ್ಕೆ ಆಶೀರ್ವಾದಿಸಿದ್ದಾರೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ಲೇಬರ್ ಇಲಾಖೆಯಲ್ಲಿ ಲೇಬರ್ ಇನ್ಸ್‌ಪೆಕ್ಟರ್ಸ್ ಇದ್ದಾರೆ. ಅವರು ಯಾವ ಪ್ರಮಾಣದಲ್ಲಿ ಅನ್ಯಾಯ ಮತ್ತು ಅಪರಾಧಗಳನ್ನು ಮಾಡುತ್ತಾರೆಂದರೆ ಅದು ಈ ಸದನದಲ್ಲಿ ನಾನು ಹೇಳತೀರದು.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಯಾವ ಇಲಾಖೆಯ ಬೇಡಿಕೆಗಳ ಮೇಲೆ ಮಾತನಾಡುತ್ತಿದ್ದಾರೆ ?

ಅಧ್ಯಕ್ಷರು.—ತಾವು ಬೇಡಿಕೆಗೆ ಸಂಬಂಧಪಟ್ಟಂತೆ ಮಾತನಾಡಿದರೆ ಒಳ್ಳೆಯದು.

ಶ್ರೀ ಬಿ. ದೊಡ್ಡಬೋರೇಗೌಡ.—ಮಾನ್ಯ ಅಧ್ಯಕ್ಷರೇ, ನಾನು ಮಾತನಾಡುತ್ತಿರುವ ವಿಷಯ ಈ ಬೇಡಿಕೆಗಳಿಗೆ ಸಂಬಂಧಪಟ್ಟಿದ್ದು. ಅಂದರೆ ಜನರಲ್ ಅಡ್ಮಿನಿಸ್ಟ್ರೇಷನ್‌ಗೆ ಸಂಬಂಧಪಟ್ಟಿದ್ದು. ಇನ್ನು ನಮ್ಮ ರಾಜ್ಯದ ಸೇಲ್ಸ್ ಟ್ಯಾಕ್ಸ್‌ನ್ನು ಅಧಿಕಾರಿಗಳು ಸರಿಯಾದ ಪ್ರಮಾಣದಲ್ಲಿ ವಸೂಲು ಮಾಡುತ್ತಿಲ್ಲ. ಮತ್ತೆ ಕರ್ನಾಟಕ ರಾಜ್ಯದಲ್ಲಿ ಯಾರೇ ಚಿತ್ರವನ್ನು ತಯಾರು ಮಾಡಿದ್ದರೆ ಅವರಿಗೆ ೧೦೦ ಪರ್ಸೆಂಟ್ ಟ್ಯಾಕ್ಸ್ ರಿಯಾಯಿತಿಯನ್ನು ಕೊಟ್ಟಿದ್ದೀರಿ. ಅದೇ ರೀತಿ ಎಲ್ಲಾ ಕನ್ನಡ ಚಲನ ಚಿತ್ರಗಳಿಗೂ ಕೂಡ ೫೦ ಪರ್ಸೆಂಟ್ ಟ್ಯಾಕ್ಸ್ ರಿಯಾಯಿತಿಯನ್ನು ಕೊಟ್ಟಿದ್ದೀರಿ. ಆದರೆ ನಮ್ಮ ಯುವಕರು ಹೆಚ್ಚಾಗಿ ಚಲನಚಿತ್ರವನ್ನು ನೋಡುತ್ತಾರೆ. ನಾನು ಇದುವರೆಗೂ ಯಾವ ಚಿತ್ರವನ್ನು ಸಹ ನೋಡಿಲ್ಲ, ನನಗೆ ಆ ಹುಚ್ಚು ಇಲ್ಲ. ಆದರೆ ನಮ್ಮ ಯುವಕರು ರಾತ್ರಿ ಬೇಳೆ ಚಿತ್ರಕ್ಕೆ ಹೋಗಿ ಬಂದು ೧೦೦ ಪರ್ಸೆಂಟ್ ಟ್ಯಾಕ್ಸ್ ರಿಯಾಯಿತಿಯನ್ನು ಕೊಟ್ಟಿದ್ದಾರೆ. ಚಿತ್ರ ಬಿಡಲಿ ಚನ್ನಾಗಿದೆ ಎಂದು ಹೇಳುತ್ತಾರೆ. ಆದ್ದರಿಂದ ನಾನು ಮಾನ್ಯ ಮಂತ್ರಿಗಳಿಗೆ ಸಲಹೆ ಮಾಡುವುದೇನೆಂದರೆ ಈ ೧೦೦ ಪರ್ಸೆಂಟ್‌ನ್ನು ಬಂದರೆ ಟ್ಯಾಕ್ಸ್ ರಿಯಾಯಿತಿಯನ್ನು ಕೊಡುವುದಾದರೂ ಏತಕ್ಕೆ ? ಇದರಿಂದ ರಾಜ್ಯದ ಬೊಕ್ಕಸಕ್ಕೆ ಎಷ್ಟು ಹಣ ನಷ್ಟವಾಗುತ್ತದೆ. ಆದ್ದರಿಂದ ತಾವು ಈ ಟ್ಯಾಕ್ಸ್‌ನ್ನು ಕಟ್ಟು ನಿಟ್ಟಾಗಿ ವಸೂಲು ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಇನ್ನು ಕೊಲೆಯಂದಾಗಿ ನಾನು ಪೋಲೀಸ್ ಇಲಾಖೆಯ ಬಗ್ಗೆ ಪ್ರಸ್ತಾಪ ಮಾಡುವುದಾದರೆ ಅವರು ಉಪಯೋಗಿಸುವಂಥ ಭಾಷೆಯನ್ನು ನೋಡಿದರೆ ಅವರಿಗೆ ನ್ಯಾಯವಾಗಿ ಮಾತನಾಡುವುದಕ್ಕೆ ಬರುವುದಿಲ್ಲವೇನೋ ಎಂದು ನನಗನ್ನಿಸುತ್ತದೆ. ಅವರು ಯಾರಿಗೂ ಕೂಡ ಮರ್ಯಾದೆ ಕೊಟ್ಟು ಮಾತನಾಡುವುದಿಲ್ಲ ಮತ್ತು ನಮ್ಮಿಂದ ನೂರಾರು ರೂಪಾಯಿಗಳ ಹಣವನ್ನು ತೆಗೆದುಕೊಂಡು ವ್ಯಂಗವಾಗಿ ಮಾತನಾಡಿ ಕಳುಹಿಸಿ ಕೊಡುತ್ತಾರೆ. ಆದರೆ ಅದೇ ಸಬ್ ರಿಜಿಸ್ಟ್ರಾರ್ ಆಫೀಸ್‌ನಲ್ಲಿ ೧೦೦ ರೂಪಾಯಿಗಳು ಕೊಟ್ಟರೆ ನಮ್ಮ ಕೆಲಸ ಕೂಡ ಮಾಡಿಕೊಟ್ಟು ಆ ಪೆಣದಲ್ಲಿಯೇ ನಮಗೂ ಒಂದು ಕಪ್ ಕಾಫಿ ಕೊಟ್ಟು ಕಳುಹಿಸಿ ಕೊಡುತ್ತಾರೆ, ಆದರೆ ಅವರು ಕೊಟ್ಟಂತಹ ಮರ್ಯಾದೆ ಕೂಡ ಈ ಪೋಲೀಸ್‌ನವರು ಕೊಡುವುದಿಲ್ಲ. ಒಂದು ಸಾವಿರ ರೂಪಾಯಿಗಳ ಜಮೀನನ್ನು ರಿಜಿಸ್ಟರ್ ಮಾಡಿಸಬೇಕಾದರೆ ಸುಮಾರು ೫೦೦ ರೂಪಾಯಿ ಗಳನ್ನು ಖರ್ಚು ಮಾಡಿಸುತ್ತಾರೆ. ಆದ್ದರಿಂದ ನಾನು ಹೇಳುವುದೇನೆಂದರೆ ರಾಜ್ಯದಲ್ಲಿ ಇವತ್ತು ಲಂಚ ಗೊಳಿತನ ಬೆಳೆಯುತ್ತಿದೆ. ಇದನ್ನು ತಪ್ಪಿಸಲು ಮಾನ್ಯಮಂತ್ರಿಗಳು ಸೂಕ್ತ ಕ್ರಮವನ್ನು ತೆಗೆದು ಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ. ಇವತ್ತು ನಮ್ಮ ರಾಜ್ಯದ ಬಜೆಟ್‌ನಲ್ಲಿ ಸುಮಾರು ೩೫.೦೫ ಕೋಟಿ ರೂಪಾಯಿಗಳನ್ನು ಪೂರ್ಣಬಳಸಾರಿಗೆಗೆ ಮಾತ್ರ ಕೊಡುತ್ತಿದ್ದೇನೆ. ಆದರೂ ಕೂಡ ಲಂಚಗೊಳಿತನ ನಿರ್ಮೂಲನೆಯಾಗಿಲ್ಲ. ಆದ್ದರಿಂದ ಮಾನ್ಯಮಂತ್ರಿಗಳು ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ, ಇದುವರೆಗೂ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಪಿ. ಗಂಗಾಧರಪ್ಪ (ತಿಪಟೂರು).—ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿರತಕ್ಕಂಥ ಬೇಡಿಕೆಗಳ ಬಗ್ಗೆ ನಾನು ಮಾತನಾಡಲು ಸ್ವಲ್ಪವೇ ಕಾಲಾವಕಾಶ

ವಿರುವುದರಿಂದ ಫಿಶರೀಸ್ ಡೆವಲಪ್‌ಮೆಂಟ್ ಬಗ್ಗೆ ಮಾತ್ರ ಕೆಲವಾರು ಮಾತುಗಳನ್ನು ಹೇಳ ಬಯಸುತ್ತೇನೆ. ಈ ಇಲಾಖೆಯಲ್ಲಿ ನಡೆಯತಕ್ಕಂಥ ಕೆಲವಾರು ಅವ್ಯವಹಾರಗಳನ್ನು ನಾನು ಸಭೆಯ ಗಮನಕ್ಕೆ ತರಬಯಸುತ್ತೇನೆ, ಇವತ್ತು ನಮ್ಮ ಕರ್ನಾಟಕ ರಾಜ್ಯದಲ್ಲಿ ದೊಡ್ಡ ದೊಡ್ಡ ಜಲಾಶಯಗಳು ಇವೆ. ಕೆರೆಕಟ್ಟೆಗಳು ಇವೆ. ಆದರೆ ಈ ಕೆರೆಗಳಲ್ಲಿ ಸರ್ಕಾರದ ವತಿಯಿಂದ ಲಕ್ಷಾಂತರ ರೂಪಾಯಿಗಳ ಮೀನುಗಳನ್ನು ಬಿಟ್ಟು ಸಾಕಾಣಿಕೆ ಮಾಡುತ್ತಾರೆ. ಆದರೆ ಆ ಮೀನುಗಳಿಂದ ಸರ್ಕಾರಕ್ಕೆ ಯಾವುದೇ ರೀತಿಯ ಆದಾಯವಿಲ್ಲವೆಂದು ನಾನು ಹೇಳಬಯಸುತ್ತೇನೆ. ಮತ್ತು ಈ ಫಿಶರೀಸ್ ಡಿಪಾರ್ಟ್‌ಮೆಂಟ್‌ನಲ್ಲಿ ಕೆಲಸ ಮಾಡುತ್ತಿರುವ ಹೆಣ್ಣಾ ವಾಕ್ಕಳಿಗೆ ಮೆಟರ್ನಿಟಿ ಲೀವ್ ಮಂಜೂರು ಮಾಡಿದಾಗ ಅವರು ಯಾವ ರೀತಿಯಲ್ಲಿ ಮನೆಯಲ್ಲಿ ಇರುತ್ತಾರೋ ಆ ರೀತಿ ಈ ಇಲಾಖೆಯವರು ಕೆರೆಯಲ್ಲಿ ಮೀನು ಮರಿಗಳನ್ನು ಬಿಟ್ಟು ಇಲಾಖೆಯಲ್ಲಿ ಕುಳಿತು ಕೊಂಡಿದ್ದರೆ ಆದರಿಂದ ಸರ್ಕಾರಕ್ಕೆ ಆದಾಯ ಬರುತ್ತದೆಯೇ ? ನಾವು ಸಾರ್ವಜನಿಕರು ಯಾರಾದರೂ ಕೊಗಿ ಆ ಬಗ್ಗೆ ವಿಚಾರಣೆ ಮಾಡಿದಾಗ ಹೇಳುತ್ತಾರೆ ಅದು ನಮಗೆ ಸಂಬಂಧಪಟ್ಟಿದ್ದು ಅಲ್ಲಿ ಲೋಕೋಪಯೋಗಿ ಇಲಾಖೆಗೆ ಸಂಬಂಧ ಪಟ್ಟಿದ್ದೆದ್ದೆ ಎಂದು. ಆದರೆ ಲೋಕೋಪಯೋಗಿ ಇಲಾಖೆಗೆ ಹೋಗಿ ಕೇಳಿದರೆ ಅವರು ಹೇಳುತ್ತಾರೆ ಅದು ನಮಗೆ ಸಂಬಂಧಪಟ್ಟಿದ್ದು ಅಲ್ಲ. ಫಿಶರೀಸ್ ಇಲಾಖೆಗೆ ಸಂಬಂಧಪಟ್ಟಿದ್ದು ಎಂದು. ಆದ್ದರಿಂದ ನಾವು ಈಗ ಯಾರನ್ನು ಜವಾಬ್ದಾರರನ್ನಾಗಿ ಮಾಡಬೇಕು ?

ನೊಣವಿನ ಕೆರೆ ಗ್ರಾಮ ಪಂಚಾಯಿತಿ ಆದಾಯವೇ ಆರು ಸಾವಿರ ರೂಪಾಯಿಗಳು ಆ ದೊಡ್ಡ ಟೌನ್‌ನಲ್ಲಿ ಈ ವ್ಯವಸ್ಥೆ ಮಾಡಿದ್ದರಿಂದ ಕಾನೂನು ನೋಡದೆ ಅವರ ಮೇಲೆ ಇವರು, ಇವರ ಮೇಲೆ ಅವರು ಹಾಕಿಕೊಂಡು ವ್ಯವಸ್ಥಿತವಾಗಿ ಸಾವಿರಾರು ರೂಪಾಯಿ ಬರತಕ್ಕಂಥ ಆದಾಯವನ್ನು ಜೇರ್ಮನ್ನರು ಇನ್ನಿತರರು ಯಾರ್ಯಾರು ಸೇರಿಕೊಂಡು, ಏನೇನು ಮಾಡಬೇಕೋ ಅವೆಲ್ಲವನ್ನೂ ಮಾಡಿ ವ್ಯವಸ್ಥಿತವಾಗಿ ಮೀನುಗಳ ಅಪಹರಣವಾಗತಕ್ಕಂಥ ಪರಿಸ್ಥಿತಿ ಉಂಟಾಯಿತು. ಈ ರೀತಿ ಆದರೆ ಸರ್ಕಾರದ ಭೂಕ್ಕೆಸಕ್ಕೆ ದುಡ್ಡನ್ನು ಎಲ್ಲಿಂದ ತರುವುದು ? ನಮ್ಮ ರೆಗ್ಯುಲೇಟೆಡ್ ಮಾರ್ಕೆಟ್ ಇದರಲ್ಲಿ ಸಸ್ ಟ್ಯಾಕ್ಸ್ ಎನ್ನುವಂತಾದ್ದು ಇದೆ. ಸೆಸ್ ಟ್ಯಾಕ್ಸ್ ಎಂದರೆ ನೊ ಪ್ರಾಫಿಟ್ ನೊ ಲಾಸ್‌ನಲ್ಲಿ ವ್ಯವಸ್ಥೆ ಆಗಬೇಕು. ಎರಡು ಪರ್ಸೆಂಟ್ ಇರುವುದನ್ನು ಮೂರು ಪರ್ಸೆಂಟ್ ಹಾಕಿದರೆ ಈ ಮಾರ್ಕೆಟ್ಟು ನಡೆಸುವುದಕ್ಕೆ ಆಗುವುದಿಲ್ಲ. ಎಲ್ಲಿ ಹೆಚ್ಚು ವ್ಯವಹಾರ ಆಗುತ್ತದೆ ಅಂತಹ ಕಡೆ ಬೇಕಾದರೆ ಹಾಕಲಿ, ಯದ್ವಾ ತದ್ವಾ ಟ್ಯಾಕ್ಸ್ ಹಾಕಿ ದುಡ್ಡು ಬಂದದ್ದಕ್ಕೆ ಸ್ವಿಮ್ಮಿಂಗ್ ಪೂಲ್ ಕಟ್ಟುತ್ತೇವೆ ಎಂದರೆ, ಏನು ಅರ್ಥ ? ಕಬ್ಬಿನ ಕಾರ್ಖಾನೆ, ಸಕ್ಕರೆ ಕಾರ್ಖಾನೆಗಳಲ್ಲಿ ತೂಕ ಮಾಡುವ ವರು ಇಲ್ಲ. ಅಲ್ಲಿ ಹೇಳುವವರು ಇಲ್ಲ, ಕೇಳುವವರು ಇಲ್ಲ. ಊರಿನಲ್ಲಿ ಲೈಟು ಇರುವುದಿಲ್ಲ. ಎಲ್ಲಾ ಕಡೆ ಕತ್ತಲು ಇರುತ್ತದೆ. ಮಾರ್ಕೆಟ್ ದುಡ್ಡನ್ನು ಬೇರೆ ಏತಕ್ಕೂ ಖರ್ಚು ಮಾಡುವ ಹಾಗಿಲ್ಲ. ಊರಿನಲ್ಲಿ ಕತ್ತಲಿರುವಾಗ, ಇಲ್ಲಿ ಬೆಳಗಿನ ಹೊತ್ತು ಕೂಡ ಫೊರೊಸೆಂಟ್ ಲೈಟ್ ಉರಿಯುತ್ತಿರುತ್ತದೆ. ಸಾವಿರಾರು ರೂಪಾಯಿಗಳನ್ನು ಲೈಟಿಗಾಗಿ ತರಿಸಿ ಹಾಳು ಮಾಡುತ್ತಿದ್ದಾರೆ. ಒಂದು ಕಡೆ ಇಲಾಖೆಯಲ್ಲಿ ಕೆಲಸ ಮಾಡುವುದಕ್ಕೆ ದುಡ್ಡು ಇಲ್ಲ. ಇನ್ನೊಂದು ಕಡೆ ಹೇರಳವಾಗಿ ತೆರಿಗೆ ಹಾಕಿಬಿಟ್ಟು ದುಡ್ಡು ಟೆಮಾವಣೆ ಆಗುವುದು ನಡೆದಿದೆ. ಈ ಪದ್ಧತಿ ಹೋಗಬೇಕು.

ಇನ್ನು ವೆಹಿಕಲ್ಸ್ ಬಗ್ಗೆ ಹೇಳುವುದಾದರೆ ಬೆಳಿಗ್ಗೆ ಡಬ್ಬಲ್ ರೋಡ್‌ನಲ್ಲಿ ಬರುತ್ತಿದ್ದೆ. ನಾನು ಪ್ರಯಾಣ ಮಾಡುತ್ತಿದ್ದ ವಾಹನಕ್ಕೆ ಬೆಂಕಿ ಹತ್ತಿಕೊಂಡು ಹೋಯಿತೋ ಎಂದು ಸಂದೇಹ ಬಂತು.ಬಸ್ಸಿನ ಹಿಂದೆ ಮುಂದೆ ಎಲ್ಲಾ ಹೊಗೆ ತುಂಬಿತ್ತು.ಹೀಗಾದರೂ ಅಪಘಾತ ಆದರೂ ಕಾಣುವುದಿಲ್ಲ. ವಾಹನಗಳು ಎಷ್ಟು ವೇಗವಾಗಿಯಾದರೂ ಹೋಗಲಿಕ್ಕೂ ಅವಕಾಶ ಕೊಟ್ಟಿದ್ದಾರೆ.ಇದರಿಂದ ವಾತಾವರಣ ಕಲುಷಿತ ವಾಗುವುದಕ್ಕೆ ಕಾರಣವಾಗುತ್ತದೆ. ಅಪಘಾತ ಆಗುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲಿ ದೋಷ ಎಲ್ಲಿದೆ ? ಜನತಾಪಕ್ಷ ಅಧಿಕಾರಕ್ಕೆ ಬರುತ್ತದೋ ಇಲ್ಲವೋ ಎನ್ನುವ ಅನುಮಾನದಿಂದ ವಾಗ್ದಾನ ಕೊಟ್ಟುಬಿಟ್ಟಿದ್ದಾರೆ. ನಮ್ಮಲ್ಲಿ ವ್ಯಾಪಾರಸ್ಥರು ನಷ್ಟ ಹೊಂದುವಾಗ, ಆ ಸಮಯದಲ್ಲಿ 'ದಸ್ ಬೀಸ್‌ಕೋ ಡರೋ ಮತೆ, ಸೌಕೋ ಸಂಬಾಲೋ. ಹಜಾರ್‌ಕೊ ಬಜಾರ್ ಬತಾವೋ. ಲಾಕ್ ಕರೋಡ್ ಆಸ್ಸಾನ್ ಬತಾವೋ, ಎಂದು ಹೇಳಂತ್ತಾರೆ. ಹೀಗೆ ದಸ್ ಬೀಸ್‌ಕೋ ಡರೋಮತಾ. ಹತ್ತು ಇಪ್ಪತ್ತು ಏನು ಮಹಾ ದೊಡ್ಡದು ಎಂದು ಕೇಳೋಕೆ ಬರ್ತಾರೆ. ಕೊಡ್ತೀನಿ ಹೋಗಯ್ಯ ಎಂದು ಹೇಳುತ್ತಾರೆ. ಸೌಕೋ ಸಂಬಾಲೂ. ನಾಳೆ ಕೊಡ್ತೀನಿ ನಾಡಿದ್ದು ಕೊಡೋಣ ಎಂದು ಹೇಳುತ್ತಾರೆ. ಹಜಾರ್‌ಕೊ ಬಜಾರ್ ಬತಾವೋ ಇದರಸೆ ಅನೇಕಾ ಹೈ ಉದರಸ್ ಅನೇಕಾ ಹೈ ಅವರಿಗೆ ಕೊಡಬೇಕು,

ಇವರಿಗೆ ಕೊಡಬೇಕು ಎಂದು ಹೇಳುತ್ತಾರೆ. ಲಾಕ್ ಕರೋಡ್‌ಕೊ ಆಸ್ಮಾನ್ ಬತಾವೊ. ಒಂಭತ್ತು ತಿಂಗಳಾಗುತ್ತದೆ ತಡೀರಿ, ಎಂಟು ತಿಂಗಳಾಗಂತ್ತದೆ ತಡೀರಿ. ದುಡ್ಡು ಸೇರಿಸಬೇಕು ತಡೀರಿ—ಅಂತ ಹೀಗೆ ಹೇಳಿದರೆ ಹೇಗೆ ? ಜನತಾದವರು ಏನು ಪಾಗ್ಡಾನ ಕೊಟ್ಟಿದ್ದರು, ಏನು ಆಶ್ವಾಸನೆ ಕೊಟ್ಟಿದ್ದರು ಎನ್ನತಕ್ಕಂಥ ವಿಚಾರ ಬಹಳ ಮುಖ್ಯ. ಆವುಗಳನ್ನು ಈಡೇರಿಸಲು ದೃಢ ಸಂಕಲ್ಪ ಬೇಕು. ಎಲ್ಲಿ ಮನಸ್ಸಿದೆಯೋ ಅಲ್ಲಿ ಮಾರ್ಗ ಇದೆ. ಆದ್ದರಿಂದ ಸರ್ಕಾರ ಕೇಂದ್ರ ಸರ್ಕಾರದ ಜೊತೆಯಲ್ಲಿ ಸರಿಯಾಗಿ ಸಂಬಂಧ ಇಟ್ಟುಕೊಂಡು ಅವರ ಸಹಾಯವನ್ನು ತೆಗೆದುಕೊಳ್ಳಬೇಕ್ಲ್ಲಿ ತಪ್ಪಿಳುನಾಡು, ಆಂಧ್ರದವರು ಹೇಗೆ ತಮ್ಮ ಬಾಂಧವ್ಯವನ್ನು ಕೇಂದ್ರದೊಡನೆ ಇಟ್ಟಿದ್ದಾರೆ ಎಂಬುದನ್ನು ನೋಡಬೇಕು. ನಾನು ಕಳೆದ ವಿಚಾರದ ಬಗ್ಗೆ ಮಾತನಾಡದೆ ನಾಳೆ ಏನು ಆಗಬೇಕೆಂಬುದು ಇವತ್ತು ಮುಖ್ಯವಾಗಿದೆ. ಹೇಗೆ ಜನತೆ ನಮ್ಮನ್ನು ನಂಬಿ ಮತವನ್ನು ಕೊಟ್ಟು ನಿಮ್ಮನ್ನು ಆರಿಸಿದ್ದಾರೆ. ಅವರ ಆಭಿಪ್ರಾಯವನ್ನು ಮುಂದುವರೆಸಿಕೊಂಡು ಹೋಗುವ ಶಕ್ತಿಯನ್ನು ನೀವು ಗಳಿಸಿಕೊಳ್ಳಬೇಕು. ಅದು ಬಿಟ್ಟು ಇವರು ಕೊಡಲಿಲ್ಲ, ಅವರು ಕೊಡಲಿಲ್ಲವೆಂದು ಹೇಳುವುದನ್ನು ಬಿಟ್ಟು ಕೆಲಸ ಕಾರ್ಯವೇನಾದರೂ ಮಾಡಿದ್ದೀರಾ ಎಂದು ನೋಡಿದರೆ ಇಲ್ಲವೆಂದು ಹೇಳಬೇಕಾಗುತ್ತದೆ. ಈ ದಿಸೆಯಲ್ಲಿ ಏನೂ ಕೆಲಸವೇ ಆಗದೇ ಇರ ತಕ್ಕದ್ದು ಕೋಚನೀಯ ಇನ್ನು. ನಮ್ಮ ತಿಪಟೂರಿನಲ್ಲಿ ಬಸ್‌ಸ್ಟ್ಯಾಂಡಿನಲ್ಲಿ ವಾರದಲ್ಲಿ ಎರಡು ಸಲ ಸಾವಿರಾರು ರೂಪಾಯಿ ಹರಾಜು ಆಗತಕ್ಕದ್ದು ಇದೆ. ಆದರೆ ಬಸ್‌ಸ್ಟ್ಯಾಂಡಿನಲ್ಲಿ ಪಿಕ್‌ಪಾಕೆಟ್ ಆಗುತ್ತದೆ. ನಮ್ಮಲ್ಲಿ ಒಂದು ಗಾದೆ ಹೇಳುತ್ತಾರೆ ಸಂತೆ ಕೊಡುವ ಮುಂಚೆ ಗಂಟುಕಳ್ಳರು ಸೇರಿದರು. ಅಂತ. ಪಿಕ್ ಪಾಕೆಟ್ ಮಾಡುವವರು, ದುಡ್ಡು ಹೊಡೆಯುವವರು ಎಲ್ಲರೂ ಬರುವುದಕ್ಕೆ ಮುಂಚೆ ಬಂದು ಸೇರುತ್ತಾರೆ. ಈ ರೀತಿ ಆಗುತ್ತಿರುವುದರಿಂದ ಪೋಲೀಸ್ ಇಲಾಖೆಯವರು ಹೆಚ್ಚಿನ ನಿಗಾ ಇಡುವುದು ಆಗತ್ಯವಾಗಿದೆ. ಸರ್ಕಾರದವರು ಅವರಿಗೆ ಸರಿಯಾದ ಆದೇಶವನ್ನು ಕೊಡಬೇಕು. ಇಷ್ಟು ದಷ್ಟು ಇಲಿ ಕಚ್ಚಿಕೊಂಡು ಹೋಯ್ತು ಅಂತ ನಮ್ಮಲ್ಲಿ ಗಾದೆ ಹೇಳುತ್ತಾರೆ. ಗ್ರಾಪಾಂತರ ಪ್ರದೇಶದಲ್ಲಿ ವರ್ಷವಿಡೀ ಬೆಳೆದು ಬಂದುದನ್ನು ಇಲ್ಲಿ ಬಂದು ಹೀಗೆ ಜನರು ಕಳೆದುಕೊಳ್ಳುತ್ತಾರೆ. ಇದನ್ನು ನಾನು ಕಣ್ಣಾರೆ ಕಂಡಿದೇನೆ ಆದ್ದರಿಂದ ಸರ್ಕಾರದವರು ಇದನ್ನು ಗಮನಿಸಬೇಕೆಂದು ನಾನು ಹೇಳುತ್ತೇನೆ.

ಇನ್ನು ನಮ್ಮ ತುಮಕೂರಿನಿಂದ ತಿಪಟೂರು ತಾಲ್ಲೂಕ್‌ಗೆ ನಲ್ವತ್ತು ಅರವತ್ತು ಮೈಲಿ ಆಗುತ್ತದೆ. ಅಲ್ಲಿಂದ ಒಬ್ಬ ರೈತ ಜಿಲ್ಲಾಧಿಕಾರಿಯನ್ನು ನೋಡಬೇಕೆಂದರೆ ಅರವತ್ತು ಮೈಲಿ ಬಸ್ಸಿನಲ್ಲಿ ಬರಬೇಕು. ಆದ್ದರಿಂದ ಈ ಡಿಸ್ಟ್ರಿಕ್ ರಿ ಆರ್ಗನೈಸೇಷನ್ ಆಗಬೇಕಾಗಿರುವುದನ್ನು ಈಗಲಾದರೂ ಅದನ್ನು ತೆಗೆದು ಕೊಳ್ಳಲಿಕ್ಕೆ ವ್ಯವಸ್ಥೆ ಮಾಡಬೇಕು. ಗುಬ್ಬಿ, ತಿಪಟೂರು, ಅರಸೀಕೆರೆ, ತುರುವೆಕೆರೆ, ಹೊಸದುರ್ಗದ ಸ್ವಲ್ಪ ಪ್ರದೇಶ, ಚನ್ನರಾಯಪಟ್ಟಣ, ಕಡೂರು ಕೆಲವು ಭಾಗವನ್ನು ತೆಗೆದುಕೊಂಡು ಒಂದು ಜಿಲ್ಲೆಯಾಗಿ ಮಾಡಿದರೆ ಅದಕ್ಕೆ ತಿಪಟೂರು, ಅಥವಾ ಅರಸೀಕೆರೆಯನ್ನು ಕೇಂದ್ರವಾಗಿ ಮಾಡಿದರೆ ಸಾರ್ವಜನಿಕವಾಗಿ ತುಂಬಾ ಅನುಕೂಲವಾಗುತ್ತದೆಎನ್ನತಕ್ಕಂಥ ವಿಚಾರವನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಹಾಗೆಯೇ ಸರ್ಕಾರದಿಂದ ಬರತಕ್ಕ ಗ್ರಾಂಟಿನಲ್ಲಿ ೧೯೮೨–೮೩ಕ್ಕೆ ೯೯ ಲಕ್ಷ ಗ್ರಾಂಟ್ ಬಂದರೆ ಅದರಲ್ಲಿ ೬೬ ಲಕ್ಷ ಮಾತ್ರ ವಿಚಾರಿಸಿತು. ಜಿಲ್ಲಾಧಿಕಾರಿಯವರನ್ನು ಕೇಳಿದರೆ ದುಡ್ಡು ಬಂದಿಲ್ಲವೆಂದು ಹೇಳುತ್ತಾರೆ. ಫೇಮಿನ್ ರಿಲೀಫ್ ವರ್ಕ್ಸ್ ನಿಲ್ಲಿಸಿಬಿಡಿ ಎಂದು ಹೇಳುತ್ತಿದ್ದಾರೆ. ಕ್ಷಾಮಪೀಡಿತ ಪ್ರದೇಶದಲ್ಲಿ ಜನರ ಕಷ್ಟವನ್ನು ಕೇಳುವವರೇ ಇಲ್ಲವಾಗಿದೆ ಅಲ್ಲಿ ಮಳೆ ಇಲ್ಲ. ಅಕ್ಕಿ ಮೊದಲು ಸಾವಿರ ಸಾವಿರ ಚೀಲ ಬರುತ್ತಿದ್ದುದನ್ನು ಈಗ ಇನ್ನೂರು ಚೀಲಕ್ಕೆ ಇಳಿಸಿದ್ದಾರೆ. ಪಟ್ಟಣ ಪ್ರದೇಶದಲ್ಲಿ ನಾಗರಿಕರಿಗೆ ೨೦–೨೫ ಕೆ ಜಿ. ಅಕ್ಕಿ ಕೊಟ್ಟರೆ ಅಲ್ಲಿ ಎರಡು–ಎರಡೂವರೆ ಕೆ.ಜಿ. ಅಕ್ಕಿ ಕೊಡುವ ವ್ಯವಸ್ಥೆ ಇದೆ. ಜನರ ಜೀವನ ಜೀವನ ಬಹಳ ಕಷ್ಟವಾಗಿದೆ. ಸರ್ಕಾರ ಕಣ್ಣುಮುಚ್ಚಿಕೊಂಡು ಕೂತಿದೆ. ಅಲ್ಲಿ ಬರುತ್ತದೆ, ಇಲ್ಲಿ ಬರುತ್ತದೆ ವಿಚಾರ ಮಾಡುತ್ತೇವೆಂದು ಹೇಳಿದರೆ ಸಮಸ್ಯೆ ಬಗೆಹರಿಯುವುದಿಲ್ಲ. ಮೊನ್ನೆ ನಾನು ಊರಿಗೆ ಹೋಗಿದ್ದಾಗ ೫೦೦ ಜನ ನಮ್ಮ ಮನೆ ಹತ್ತಿರ ಬಂದು ಘೇರಾವ್ ಮಾಡುವುದಕ್ಕೆ ಪ್ರಾರಂಭ ಮಾಡಿದರು ಕಾರಣ ಅಲ್ಲಿ ಅಕ್ಕಿ ಸರಬರಾಜು ಇಲ್ಲದ್ದರಿಂದ ಈ ಒಂದು ಕಷ್ಟವಾಯಿತು. ಇನ್ನು ಮೇಲೆ ನಮ್ಮಂತಹವರು ಹಳ್ಳಿಕಡೆ ತಿರುಗಾಡತಕ್ಕಂಥದ್ದೇ ಬಹಳ ಕಷ್ಟ. ಕೇಂದ್ರ ಸರ್ಕಾರದವರು ಸಾಕಷ್ಟು ಅಕ್ಕಿ ಕೊಟ್ಟಿದ್ದಾರೆ. ನಮ್ಮ ನಾಯಕರೂ ಕೂಡ ಆ ಬಗ್ಗೆ ಹೇಳಿದ್ದಾರೆ. ಆ ರೀತಿಯಲ್ಲಿ ಇನ್ನೂ ಹೆಚ್ಚಿನ ಅಕ್ಕಿ ಹಾಗೂ ಗ್ರಾಂಟ್‌ಗಳು ಏನೇನು ಇವೆಯೋ ಅವುಗಳನ್ನು ಕೇಂದ್ರದಿಂದ ತರಿಸಿಕೊಳ್ಳುವುದರ ಜೊತೆಗೆ, ಹೆಚ್ಚಿಗೆ ಸಂಪನ್ಮೂಲವನ್ನು ರೂಢಿಸಿಕೊಳ್ಳತಕ್ಕಂತಹದು ಸರ್ಕಾರದವರ ಜವಾಬ್ದಾರಿ. ಈ ಒಂದು

ಜವಾಬ್ದಾರಿಯನ್ನು ಸರ್ಕಾರ ಸರಿಯಾಗಿ ನಿರ್ವಹಿಸಬೇಕೆಂದು ಸಲಹೆ ಮಾಡುತ್ತಾ, ಇವತ್ತು ಏನು ಈ ಸದಸದಲ್ಲಿ ೧೬ ಬೇಡಿಕೆಗಳನ್ನು ಮಂಡಿಸಿದ್ದಾರೆ ಅವುಗಳನ್ನು ವಿರೋಧಿಸುತ್ತಾ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತಂಗಳನ್ನ ಮುಗಿಸುತ್ತೇನೆ.

ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಇಟ್ಟಿರತಕ್ಕಂತಹ ೧೬ ಬೇಡಿಕೆಗಳನ್ನು ವಿರೋಧ ಮಾಡುತ್ತಾ ಕೆಲವು ವಿಷಯಗಳನ್ನು ಸಭೆಯ ಮುಂದೆ ಇಡುವುದಕ್ಕೆ ಇಷ್ಟಪಡುತ್ತೇನೆ. ವಿರೋಧ ಮಾಡುವುದಕ್ಕೆ ಇಷ್ಟೇ ಕಾರಣ. ಈ ಸರ್ಕಾರ ಏನು ಭರವಸೆಗಳನ್ನು ಕೊಟ್ಟಿತ್ತೋ, ಅಥವಾ ಚುನಾವಣೆಗೆ ಮುನ್ನ ಜನತಾ-ರಂಗ ಜನತೆಯ ಮುಂದೆ ಏನು ಭರವಸೆಗಳನ್ನು ಕೊಟ್ಟಿತ್ತೋ ಆ ಭರವಸೆಗಳನ್ನು ಇವತ್ತು ನೀರು ಪಾಲು ಮಾಡಿ, ಬೇರೆ ದಾರಿಯನ್ನು ಹಿಡಿದಿರುವ ಕಾರಣಕ್ಕಾಗಿ ನಾವು ಇವತ್ತಿನ ದಿವಸ ವಿರೋಧ ಮಾಡುತ್ತೇವೆ. ಏನು ಆವತ್ತಿನ ದಿವಸ ಬಡವರಿಗೆ, ಗೇಣಿದಾರರಿಗೆ ಪುಕ್ಕಟೆಯಾಗಿ ಖಾತೆಯನ್ನು ಕೊಡುತ್ತೇವೆಂದು, ಭೂಮಿ ಇಲ್ಲದವರಿಗೆ ಭೂಮಿಯನ್ನು ಕೊಡುತ್ತೇವೆಂದು ಹೇಳಿದ್ದರು. ಹಾಗೆಯೇ ಮುಳುಗಡೆಯಾದಂತಹ ರೈತರಿಗೆ ತಕ್ಷಣ ಪರಿಹಾರವನ್ನು ಕೊಡುತ್ತೇವೆಂದು ಹೇಳಿದ್ದರು. ಮತ್ತು ಸ್ವೆಚ್ಛಫೆಂಡರಿ ಗ್ರಾಜುಯೇಟ್ಸ್‌ಗೆ ನಿಮಗೆ ಕೆಲಸವನ್ನು ಖಾಯಂ ಮಾಡುತ್ತೇವೆಂದು ಹೇಳಿದ್ದರು. ಆದರೆ ಆ ಯಾವ ಕೆಲಸವನ್ನು ಇವರು ಮಾಡಲಿಲ್ಲ. ಮತ್ತೆ ರೈತರ ಸಾಲವನ್ನು ಮನ್ನಾ ಮಾಡುತ್ತೇವೆಂದೂ ಹೇಳಿದ್ದರು. ಆದರೆ ಶ್ರೀಮಂತರ ಸಾಲ ಮಾತ್ರ ಮನ್ನಾ ಆಯಿತು. ಈ ರೀತಿಯ ಇನ್ನೂ ಹಲವಾರೂ ಆಶ್ವಾಸನೆಗಳು ಹಾಗೆಯೇ ಇವೆ. ಆದ್ದರಿಂದ ಈ ಜನತಾ ಸರ್ಕಾರಕ್ಕೆ ಬೇರೆ ಹೆಸರನ್ನು ಇಡಬೇಕಾಗಿದೆ, ಇದು ಭೂ ಮಾಲೀಕರ ಸರ್ಕಾರ, ಜಮೀನುದಾರರ ಸರ್ಕಾರವೆಂದು ಹೆಸರನ್ನು ಇಡಬೇಕಾಗುತ್ತದೆ. ಈಗ ಮೊನ್ನೆ ತಾನೇ ಮಾನ್ಯ ಮಂತ್ರಿಗಳಾದ ಶ್ರೀಮಾನ್ ವಿ. ಎಲ್. ಪಾಟೀಲ್‌ರವರು ಹಾಗೂ ಮಾನ್ಯ ಮುಖ್ಯ ಮಂತ್ರಿಗಳು ಭೂನ್ಯಾಯ ಮಂಡಲಿಗೆ ನಾಮಕರಣ ಮಾಡಿದ್ದಾರೆ. ಹಿಂದೆ ಹಲವಾರು ವರ್ಷಗಳಿಂದ ಹೋರಾಟ ಮಾಡಿದ ಫಲವಾಗಿ ದಿವಂಗತ ದೇವರಾಜ್ ಅರಸ್‌ರವರ ಕಾಲದಲ್ಲಿ ಈ ಭೂಸಂಧಾರಣೆ ಜಾರಿಗೆ ಬಂತು. ಅದಕ್ಕಾಗಿ ಭೂನ್ಯಾಯ ಮಂಡಲಿಗಳನ್ನು ಅಂದಿನ ಸರ್ಕಾರದವರು ಮಾಡಿದ್ದರು. ಅದೇ ರೀತಿ ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಕಂದಾಯ ಮಂತ್ರಿಗಳಾಗಿರುವಂತಹ ಶ್ರೀಮಾನ್ ವಿ. ಎಲ್ ಪಾಟೀಲ್‌ರವರು ಹಾಗೂ ಮುಖ್ಯ ಮಂತ್ರಿಗಳು ಭೂ ನ್ಯಾಯ ಮಂಡಲಿಯನ್ನು ಪುನರ್‌ಚನೆ ಮಾಡಿದರು. ಅದರಲ್ಲಿ ನಮ್ಮ ತಾಲ್ಲೂಕನ್ನೇ ಉದಾಹರಣೆಯಾಗಿ ಹೇಳುವುದಾದರೆ, ನಮ್ಮ ತಾಲ್ಲೂಕಿನ ಅತಿ ದೊಡ್ಡ ಶ್ರೀಮಂತ ರಾಗಿರುವವನ್ನು ಹಾಗೂ ಜಮೀನುದಾರರನ್ನು ಭೂ ನ್ಯಾಯ ಮಂಡಲಿಗೆ ಸದಸ್ಯರನ್ನಾಗಿ ನೇಮಕ ಮಾಡಿದ್ದಾರೆ. ಈ ರೀತಿ ಶಿವಮೊಗ್ಗ ತಾಲ್ಲೂಕು ಹಾಗೂ ಹೊಸನಗರ ತಾಲ್ಲೂಕುಗಳಿರಡಲ್ಲೂ ಮಾಡಿ ದ್ದಾರೆ. ಈ ತರಹ ಮಾಡಿದರೆ, ಗೇಣಿದಾರರಿಗೇನಾದರೂ ರಕ್ಷಣೆ ಸಿಕ್ಕುತ್ತದೆಯೇ ? ರಕ್ಷಣೆ ಕೊಡುತ್ತಾರೆಯೇ ಎಂಬುದನ್ನು ವಿಚಾರ ಮಾಡಬೇಕು. ಇಲ್ಲವೆಂದರೆ ನಾನು ಇಂಥಿಂಥವರನ್ನು ಭೂ ನ್ಯಾಯ ಮಂಡಲಿಗಳಲ್ಲಿ ಹಾಕಿ ಎಂದು ಕೊಟ್ಟಂತಹ ಪಟ್ಟಿ ಎಲ್ಲಿ ಹೋಯಿತು? ನಿಮ್ಮ ಪಕ್ಷದವರು ನಿಮಗೆ ಬೇಕಾದ ಜನರಿಗೆ ಅನುಕೂಲವನ್ನು ಮಾಡಿಕೊಡುವುದಕ್ಕೋಸ್ಕರ ಮಾಡಿದರೆ ಸಾಮಾನ್ಯ ಗೇಣಿದಾರರಿಗೆ ನ್ಯಾಯ ಸಿಕ್ಕುತ್ತದೆಯೇ ಎಂದು ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಈ ರೀತಿಯ ಹಲವಾರು ಕಾರಣಗಳನ್ನು ಕೊಡಬೇಕು. ಖರ್ಚು ಕಡಿಮೆ ಮಾಡಬಹುದು. ಆದರೆ ಪಾವಗಡದಲ್ಲಿ ತೋಳಗಳನ್ನು ಹಿಡಿಯುವುದಕ್ಕಾಗಿ ಹೆಲಿಕ್ಯಾಪ್ಟರ್‌ನ್ನು ಕಳುಹಿಸಿಕೊಡುತ್ತಾರೆ. ಮತ್ತು ನಮ್ಮ ಮಾಸ್ಟರ್ ಹಿರಣ್ಣಯ್ಯನವರ ಅಡಿಗೆ ಭಟ್ಟರನ್ನು ಅಮೇರಿಕಾಕ್ಕೆ ಕಳುಹಿಸಿಕೊಡುತ್ತಾರೆ. ಆದರೆ ಇಲ್ಲಿ ಅದಕ್ಕಿಂತ ಹೆಚ್ಚಿನ ಕಷ್ಟದಲ್ಲಿರ ಶಕ್ಕಂತಹ, ಕನ್ನಡಕ್ಕಾಗಿ ಸೇವೆ ಮಾಡಿರತಕ್ಕಂತಹ ದಿವಂಗತ ಶ್ರೀಮಾನ್ ಕಾಳಿಂಗರಾಯರ ಮನೆಯಂವರು ಬೀದಿಯಲ್ಲಿ ಅಲೆಯುತ್ತಿದ್ದಾರೆ. ಅದು ಈ ಸದನದ ಗಮನಕ್ಕೆ ಬಂದಿದೆಯೋ ಅಥವಾ ಇಲ್ಲವೋ ಗೊತ್ತಿಲ್ಲ. ವಿಧಾನಸೌಧ ಸುತ್ತ ಅಲೆಯುವುದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಅವರ ಸಹಾಯಕ್ಕೆ ಸರ್ಕಾರ ಬರಲಿಲ್ಲ. ಮಾಂಖ್ಯ ಮಂತ್ರಿಗಳಾಗಲಿ, ಅಥವಾ ಮಂತ್ರಿಗಳಾಗಲಿ ಆ ಎರಡು ಹೆಣ್ಣುಮಕ್ಕಳು, ಕಾಳಿಂಗರಾಯರ ಮನೆಯವರು ಏನಿದ್ದಾರೆ ಅವರ ರಕ್ಷಣೆಗೆ ಹೋಗಲಿಲ್ಲ. ಕಾಳಿಂಗರಾಯರ ಸೇವೆ ಕರ್ನಾಟಕದಲ್ಲಿ ಮರೆಯುವಂತಿಲ್ಲ. ಅವರ ಕ್ಷೇಮವನ್ನು ನೋಡಲಿಲ್ಲ. ಅವರೆ ಮಾಸ್ಟರ್ ಹಿರಣ್ಣಯ್ಯನವರ ಅಡಿಗೆ ಭಟ್ಟರನ್ನು ಅಮೇರಿಕಾಕ್ಕೆ ಕಳುಹಿಸುವುದಕ್ಕೆ ಒಂದವರೆ ಲಕ್ಷ ಹಣವನ್ನು ಕೊಡುತ್ತಾರೆ. ಮತ್ತೆ ವಿಧಾನಸೌಧದ ಪಕ್ಕದಲ್ಲಿ ಸತ್ಯಾಗ್ರಹ ಕುಳಿತಿರುವಂತಹ ಸ್ವೆಚ್ಛಫೆಂಡರಿ ಗ್ರಾಜುಯೇಟ್ಸ್‌ರವರ ಕಡೆ ಸರ್ಕಾರ ಇವತ್ತು ನೋಡುತ್ತಿಲ್ಲ. ನಿಮ್ಮ ಸಮಸ್ಯೆಗಳನ್ನು ಬಗೆಹರಿಸುತ್ತೇವೆಂದು ಹೇಳಿ, ಅಧಿಕಾರಕ್ಕೆ ಬಂದವರು, ಈಗ ಬಹುಶಃ ಮಾತೆತ್ತಿದರೆ ಹಣಕಾಸಿನ ಸಮಸ್ಯೆ ಅಂತ ಹೇಳುತ್ತಾರೆ.

ಶ್ರೀ ವಿ. ಎಲ್. ಪಾಟೀಲ .—ತುಲಾಭಾರ ಮಾಡಿಸಿಕೊಂಡವರು ಯಾರು? ನಾವಾ?

ಶ್ರೀ ಬಿ. ಸ್ವಾಮಿರಾವ್.—ಅವರು ಮಾಡಿಸಿಕೊಂಡರು. ಅವರು ಮಾಡಿಲ್ಲವೆಂದು ನಿಮಗೆ ಅಧಿಕಾರವನ್ನು ಕೊಟ್ಟಿದ್ದಾರೆ. ನಿಮ್ಮ ಕೈಗೆ ಅಧಿಕಾರವನ್ನು ಕೊಟ್ಟಿದ್ದಾರೆ. ಅಧಿಕಾರಕ್ಕೆ ಬಂದ ಮೇಲೆ ಮಾಡುವುದಕ್ಕೆ ಬರುವುದಿಲ್ಲ ಅಂತ ಹೇಳಿದರೆ ಚೆನ್ನಾಗಿರುತ್ತದಾ? ಏಕೆಂದರೆ ಇವತ್ತು ನಿಮ್ಮ ಕೈಯ್ಯಲ್ಲಿ ಅಧಿಕಾರ ಇರುವುದರಿಂದ, ಅದಕ್ಕೆ ಬೇಕಾದಂತಹ ಸಂಪನ್ಮೂಲವನ್ನು ರೂಢಿಸಿಕೊಳ್ಳುವುದಕ್ಕೆ ಹೊರಗಡೆಗೆ ಹೋಗಬೇಕಾಗಿಲ್ಲ, ಒಂದು ಇಲಾಖೆಯ ಉತ್ಪತ್ತಿಯನ್ನು ಇದಕ್ಕಾಗಿ ತೆಗೆದಿಡುವುದಕ್ಕೆ ಸಾಧ್ಯ ಉಂಟು. ಅದು ಯಾವುದೆಂದರೆ ಅಬಕಾರಿ ಇಲಾಖೆ. ಆ ಇಲಾಖೆಯಿಂದ ಬರತಕ್ಕಂತಹ ಲಾಭ ಒಂದೇ ಸಾಕಾಗುತ್ತದೆ. ಕೆ.ಎಸ್.ಆರ್.ಟಿ.ಸಿ ಯ ಲಾಭ ಒಂದೇ ಸಾಕು. ಒಬ್ಬ ಮಾಸಿಗೆ ಬಸ್ ಮಾಲೀಕ ಒಂದು ಬಸ್ಸನ್ನು ಇಟ್ಟುಕೊಂಡಂತಹವನು, ಒಂದು ವರ್ಷದಲ್ಲಿ ೧೦ ಬಸ್ಸುಗಳನ್ನು ಮಾಡುತ್ತಾನೆ. ಆದರೆ ೧೦ ಸಾವಿರ ಬಸ್ಸುಗಳನ್ನು ಇಟ್ಟುಕೊಂಡಿರುವ ನಮ್ಮ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಆದಾಯ ಇಲ್ಲ ನಷ್ಟ ಅನುಭವಿಸುತ್ತಿದೆ ಎಂದರೆ ಸರ್ಕಾರದ ಮಾಡಿಮೆ ಕಡಿಮೆಯಾಗುತ್ತಿದೆ, ಇಂತಹ ಒಂದು ಆಡಳಿತದಲ್ಲಿ ಹೆಚ್ಚು ಲೋಪದೋಷ ಕಾಣುತ್ತಿದೆ. ಆಲ್ಲದೆ ನಮ್ಮ ಪ್ರಧಾನ ಮಂತ್ರಿ ಮುಖ್ಯ ಮಂತ್ರಿಗಳು, ಹಲವಾರು ಹೇಳಿಕೆಗಳನ್ನು ಕೊಟ್ಟಿದ್ದಾರೆ. ಆದರೆ ಇಲ್ಲಿಯ ಅವರ ಕಾರ್ಯಕ್ರಮಗಳನ್ನು ನೋಡುವಾಗ ಬಹಳ ವ್ಯತ್ಯಾಸ ಇದೆ. ನಮ್ಮ ಶಿವಮೊಗ್ಗ ಜಿಲ್ಲೆಯ ಬಗ್ಗೆ ಹಲವಾರು ಸಮಸ್ಯೆಗಳಿವೆ. ಇವರು ಶಿವಮೊಗ್ಗಕ್ಕೆ ಬಂದಾಗ, ಬಹುಶ: ಜನಗಳ ಸಹಭಾಗಿರಿಯನ್ನು ಪಡೆದುಕೊಳ್ಳಬೇಕೆಂಬ ಉದ್ದೇಶವಿದೆ ಎಂದು ಕಾಣುತ್ತದೆ. ಈ ಸಭೆಯಲ್ಲಿ ಸಹ್ಯಾದ್ರಿ ಯೂನಿವರ್ಸಿಟಿಯನ್ನು ಮಂಜೂರು ಮಾಡಿದ್ದೇವೆಂದು ಹೇಳಿಕೆ ಕೊಟ್ಟರು. ಆ ನಂತರ ಈ ಸದನದಲ್ಲಿ ಅದನ್ನು ಮಾಡುವುದಕ್ಕಾಗುವುದಿಲ್ಲವೆಂದು ತೀರ್ಮಾನವಾಯಿತು. ಇಂತಹ ಹೇಳಿಕೆಗಳು ಹಲವಾರು ಇವೆ.

ಶ್ರೀ ರಾಮಕೃಷ್ಣ ಹೆಗಡೆ — ಸತ್ಯಕ್ಕೆ ದೂರವಾದ ಮಾತನ್ನು ಆಡಬೇಡಿ. ಶಿವಮೊಗ್ಗದಲ್ಲೇ ಆಗಲಿ, ಅಥವಾ ಭದ್ರಾವತಿಯಲ್ಲೇ ಆಗಲಿ, ಸಹ್ಯಾದ್ರಿ ವಿಶ್ವವಿದ್ಯಾಲಯವನ್ನು ಮಂಜೂರು ಮಾಡಿದ್ದೇವೆಂದು ನಾನು ಹೇಳಲಿಲ್ಲ. ಏತಕೆಂದರೆ ನಾಳೆ ಪತ್ರಿಕೆಯಲ್ಲಿ ಅದು ದೊಡ್ಡದಾಗಿ ಬರಬಹುದು.

ಶ್ರೀ ಬಿ.ಸ್ವಾಮಿರಾವ್,—ಶಿವಮೊಗ್ಗದಲ್ಲಿ ತಾವು ಆ ರೀತಿ ಹೇಳಿದ್ದೀರಿ.

ಶ್ರೀ ರಾಮಕೃಷ್ಣ ಹೆಗಡೆ.—ಅದು ನಿಮ್ಮ ಕಲ್ಪನೆ ಅಷ್ಟೇ. ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಬರೆದಿದ್ದೇವೆ ಅಂತ ಹೇಳಿದ್ದೇನೆ, ಮಂಜೂರು ಮಾಡಿದ್ದೇವೆ ಅಂತ ಹೇಳಲಿಲ್ಲ. ಆಷ್ಟು ಲಘುವಾಗಿ ಮಾತನಾಡತಕ್ಕಂತಹ ಅಭ್ಯಾಸ ನನಗಿಲ್ಲ.

ಶ್ರೀ ಬಿ. ಸ್ವಾಮಿರಾವ್.—ಸಭೆಯಲ್ಲಿ ಮಾತನಾಡುವಾಗ ಆ ರೀತಿ ಹೇಳಿದ್ದೀರಿ. ಮತ್ತೆ ಶಿವಮೊಗ್ಗದಲ್ಲಿ ಡಿಸ್ಟ್ರಿಕ್ಸ್ ಕಾಂಪ್ಲೆಕ್ಸ್ ಮಾಡುತ್ತಿದ್ದೇವೆಂದು ಹಿಂದಿನ ಸರ್ಕಾರ ಏನೂ ತೀರ್ಮಾನ ಮಾಡಿತ್ತು, ಈ ಸರ್ಕಾರ ಅದನ್ನು ಕಾರ್ಯಗತ ಮಾಡಿಲ್ಲ. ಇದರಿಂದ ಏನಾಗುತ್ತದೆ ಎಂದರೆ ಇವತ್ತು ಬೆಂಗಳೂರು ನಗರದಲ್ಲಿ ಗಂಗಾರಾಮ್‌ರವರ ಕಟ್ಟಡ ಯಾವ ರೀತಿ ಬಿತ್ತೋ, ಆವೇ ರೀತಿ ಒಂದಲ್ಲ ಒಂದು ದಿವಸ ಶಿವಮೊಗ್ಗದ ಡಿಸ್ಟ್ರಿಕ್ ಆಫೀಸ್ ಬೀಳುತ್ತದೆ, ಎಂಬುದನ್ನು ಸದನದಲ್ಲಿ ಮೊದಲೇ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ಶ್ರೀ ವಾನ್ ಪಲ್ಲಪ್ಪನವರು ಚಾಕು, ಚೂರಿ ಎಂಬುದಾಗಿ ಪ್ರಸ್ತಾಪ ಮಾಡುತ್ತಾ ಶ್ರೀಮಾನ್ ಬಂಗಾರಪ್ಪನವರ ರಾಜಕೀಯದ ಬಗ್ಗೆ ಹೇಳಿದರು. ಬಹುಶ: ಅವರಿಗೆ ಗೊತಿಲ್ಲ. ಒಂದು ಮಾತನ್ನು ಹೇಳುವುದಾದರೆ.

ಉಪಾಧ್ಯಕ್ಷರು.—ನಿನ್ನ ರಾಜಕೀಯದ ಬಗ್ಗೆ ಅವರು ಹೇಳಲಿಲ್ಲ. ಬಂಗಾರಪ್ಪನವರ ಬಗ್ಗೆ ಮಾತ್ರ ಹೇಳಿದ್ದು.

ಶ್ರೀ ಬಿ. ಸ್ವಾಮಿರಾವ್.—ಹೌದು ಸ್ವಾಮಿ, ಏತಕ್ಕೆಂದರೆ ಶ್ರೀಮಾನ್ ಬಂಗಾರಪ್ಪನವರು ನಮ್ಮ ಪಕ್ಷದ ನಾಯಕರು. ನಿಮ್ಮ ಮುಖ್ಯಮಂತ್ರಿಯವರು ಬಂಗಾರಪ್ಪನವರಿಗೆ ಪಕ್ಷದಲ್ಲಿ ವಿಲೀನವಾಗಿ ಎಂಬುದಾಗಿ ಏಕೆ ಕಾಗೆ ಬರದರು ಅಂತ ಕೇಳುತ್ತೇನೆ. ಶ್ರೀ ವಾನ್ ಪಲ್ಲಪ್ಪನವರು ಹೀಗೆ ಇಂತಹ ಒಂದು ಮಾತನ್ನು ಹೇಳುವುದು ಸರಿಯಿಲ್ಲ. ಮೊದಲನೆಯದಾಗಿ ನಾನು ಹೇಳುವುದಾದರೆ, ಅವರಿಗೂ ಅಧಿಕಾರ ಮಾಡುವುದಕ್ಕೆ ಬರುತ್ತದೆ. ಬರುವುದಿಲ್ಲ ಅಂತ ಏನೂ ಇಲ್ಲ. ಏಕೆಂದರೆ ರಾಜಕೀಯದಲ್ಲಿ ಎರಡು ಬಾಗಿಲುಗಳು ಇರುತ್ತವೆ. ಹಿಂದುಗಡೆ ಒಂದು ಮುಂದಗಡೆ ಒಂದು. ಹಿಂದು

ಗಡೆ ಬಾಗಿಲಿನಲ್ಲಿ ಬಂದವರಿಗೆ ಗೊತ್ತಿಲ್ಲ. ಚುನಾವಣೆಯಲ್ಲಿ ಏನು ಹೇಳಿದ್ದಾರೆ, ಏನು ಭರವಸೆ ಕೊಟ್ಟಿದ್ದರು. ಆದರೆ ಕನಕಪುರದಲ್ಲಿ ಯಾವ ರೀತಿಯಲ್ಲಿ ಕೆಲಸ ಮಾಡಿದರು, ಅದೇ ರೀತಿ ಬೇರೆ ರಾಜ್ಯದ ತಾಲ್ಲೂಕುಗಳಲ್ಲಿ ಏಕೆ ಮಾಡಲಿಲ್ಲ? ಅಲ್ಲಿ ಒಂದು ದಿವಸಕ್ಕೆ ೩೦-೪೦ ರಿಗ್‌ಗಳನ್ನು ಹಾಕುವುದಾದರೆ, ಆ ಒಂದು ಕ್ಷೇತ್ರದಲ್ಲಿ ಮಾಡುವುದಕ್ಕೆ ಬರುತ್ತದೆ, ಬೇರೆ ಕ್ಷೇತ್ರದಲ್ಲಿ ಮಾಡುವುದಕ್ಕೆ ಬರುವುದಿಲ್ಲವೇ ? ಈ ಬೇಡಿಕೆಗಳ ಬಗ್ಗೆ ಇನ್ನೂ ಹೆಚ್ಚು ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ ಇಂತಹ ಲೋಪದೋಷ ನಮ್ಮಲ್ಲಿದ್ದಾಗ ಬೇರೆಯವರ ಬಗ್ಗೆ ಹೇಳುವುದು ಸರಿಯಲ್ಲ. ಮಲ್ಲಪ್ಪ ನವರು ಹೇಳಿದಹಾಗೆ ಶ್ರೀ ಬಂಗಾರಪ್ಪನವರು ಹೊಡೆಸಿದ್ದಾರೆ ಅಂತ ಹೇಳಿದ್ದು ಸತ್ಯಕ್ಕೆ ದೂರ ವಾದ ವಿಚಾರ. ಏಕೆಂದರೆ ಜನಗಳಿಗೆ ಬಂಗಾರಪ್ಪನವರ ಬಗ್ಗೆ ಇರುವ ಅಭಿಮಾನದ ಬಗ್ಗೆ ನೀವು ಮಾಡಿದ ಪಂಚನೆಗೋಸ್ಕರ ರಸ್ತೆ ಮೇಲೆ ಇರಿಸಿ ಯಾವ ಜನವೋ ಮಾಡಿರಬಹುದು. ಬಂಗಾರಪ್ಪನವರು ಮಾಡಿಸಿದ್ದಾರೆ ಅಂತ ಹೇಳಿದ ಮಾತು ಸತ್ಯಕ್ಕೆ ದೂರವಾದುದು, ಇದನ್ನು ಶ್ರೀ ಮಲ್ಲಪ್ಪನವರು ತಿಳಿದುಕೊಳ್ಳಬೇಕು. ಅಂತ ಹೇಳಿ, ಬೇಡಿಕೆಯನ್ನು ಸಂಪೂರ್ಣವಾಗಿ ವಿರೋಧಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ,

MR. DEPUTY SPEAKER—Discussion on the Demands concluded. The House stand adjourned to meet tomorrow at 9.00 A.M.

(The House adjourned at Fourty Miniutes Past Seven of the clock to meet again at Nine of the clock on Thursday the 22nd September 1983)